## 20

# ಕೂಡಿಕೊಳ್ಳುತ್ತಿರುವ ಬಿರುಗಾಳಿ[1]

### ಓದುವ ಮನೆಪಾಠ #7

V. ಎರಡನೇ ಪಸ್ಕದಿಂದ, ಮೂರನೆಯದಕ್ಕೆ.[2]

A. ಸಬ್ಬತ್ ದಿನದಲ್ಲಿ ಹುಟ್ಟು ಕುಂಟನನ್ನು ಗುಣಪಡಿಸಿ, ಅದನ್ನು ಸಾಭೀತು ಪಡಿಸಿದ್ದು (ಯೋಹಾನ 5:1-47).

B. ಆತನ ಶಿಷ್ಯರು ಸಬ್ಬತ್ತಿನಲ್ಲಿ ತೆನೆಗಳನ್ನು ಮುರಿದ ಸಂಗತಿಯನ್ನು ಪ್ರತಿಪಾದಿಸಿದ್ದು (ಮತ್ತಾಯ 12:1-8; ಮಾರ್ಕ 2:23-28; ಲೂಕ 6:1-5).

C. ಸಬ್ಬತ್ತಿನಲ್ಲಿ ಕೈ ಬತ್ತಿ ಹೋದವನನ್ನು ವಾಸಿಮಾಡಿ ಅದನ್ನು ಪ್ರತಿಪಾದಿಸಿದ್ದು (ಮತ್ತಾಯ 12:9-14; ಮಾರ್ಕ 3:1-6; ಲೂಕ 6:6-11).

D. ಗಲಿಲಾಯ ಸಮುದ್ರದ ಬಳಿ ಅನೇಕ ಜನರನ್ನು ಗುಣಪಡಿಸಿದ್ದು (ಮತ್ತಾಯ 12:15-21; ಮಾರ್ಕ 3:7-12).

E. ಪ್ರಾರ್ಥನೆಯ ನಂತರ, ಹನ್ನೆರಡು ಜನ ಅಪೊಸ್ತಲರನ್ನು ಆಯ್ಕೆಮಾಡಿದ್ದು (ಮತ್ತಾಯ 10:2-4; ಮಾರ್ಕ 3:13-19; ಲೂಕ 6:12-16).

### ಪೀಠಿಕೆ

ಯೇಸು ತನ್ನ ಶ್ರೇಷ್ಟವಾದ ಗಲಿಲಾಯದ ಸೇವೆಯನ್ನು ಪ್ರಾರಂಭಿಸುತ್ತಿದ್ದಂತೆಯೇ, ಆತನ ಜನಪ್ರಿಯತೆಯು ವೃದ್ಧಿಸಿತು. ಜನಸಮೂಹವು ಆತನ ಬೋಧನೆಯನ್ನು ಕೇಳಲು ಸೇರಿತು ಮತ್ತು ಆತನ ಸ್ವಸ್ಥತಾ ಕಾರ್ಯವನ್ನು ಎದುರುನೋಡಿತು. ಈ ಪಾಠವನ್ನು ಸಂಪೂರ್ಣಗೊಳಿಸುವ ಆರಂಭದಲ್ಲಿ ಮುಂದಿನ ಎರಡು ಅಧ್ಯಯನಗಳಲ್ಲಿ ನಾವು ಅಧ್ಯಯನ ಮಾಡಲಿರುವ ಶ್ರೇಷ್ಟವಾದ ಪರ್ವತ - ಪ್ರಸಂಗಕ್ಕೆ ಅಸ್ತಿವಾರವನ್ನು ಹಾಕಲೆಂದು ಯೇಸು ತನ್ನ ಹನ್ನೆರಡು ಜನ ಅಪೊಸ್ತಲರನ್ನು ಆದುಕೊಂಡನು.

ಈ ಸಮಯದ ಆರಂಭದಲ್ಲಿ ಬಲು ಮಹತ್ತರವಾದದ್ದೆಂದರೆ ಯೆಹೂದಿ ನಾಯಕರ ದ್ವೇಷವು ಹೆಚ್ಚಿದ್ದು. ಯೇಸುವಿನ ಮೇಲೆ ದೂರನ್ನು ಹೊರೆಸುವುದಕ್ಕಾಗಿ ಮೂಲವನ್ನು ಹುಡುಕಲು ಯತ್ನಿಸಿ ಗೂಢಚಾರರು ಆತನನ್ನು ಎಲ್ಲೆಡೆ ಹಿಂಬಾಲಿಸುತ್ತಿದ್ದರು (ಮಾರ್ಕ 3:2; ಮತ್ತಾಯ 12:10). ಯೇಸು ತನ್ನ ವೈರಿಗಳ ಮೋಸ ತಂತ್ರಗಳಿಂದ ತಪ್ಪಿಸಿಕೊಂಡಾಗ (ಲೂಕ 6:11), "ಅವರು ... ಆತನಿಗೆ ವಿರೋಧವಾಗಿ ಆಲೋಚನೆ ಮಾಡಿದರು" ಎಂದು ಮತ್ತಾಯನು ಬರೆಯುತ್ತಾನೆ (ಮತ್ತಾಯ 12:14; ನೋಡಿರಿ ಮಾರ್ಕ 3:6). ಯೆಹೂದಿಗಳು ಆತನನ್ನು ಹಿಂಸಿಸುವವರಾದರು ಮತ್ತು ಅವರು "ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರಯತ್ನ ಮಾಡಿದರು" ಎಂದು ಯೋಹಾನನು ದಾಖಲಿಸಿದ್ದಾನೆ (ಯೋಹಾನ 5:16, 18).

ಯೆಹೂದಿಗಳ ವಿವೇಕ ಹೀನ ದ್ವೇಷದ ತಾರತಮ್ಯದ ದಾಖಲೆಯ ವಿವರಣೆಯು ಅವಶ್ಯ ಎಂದು ಸುವಾರ್ತೆಯ ಲೇಖಕರು ಯಾಕೆ ಯೋಚಿಸುವವರಾಗಿದ್ದರು? ಯೇಸುವನ್ನು ಕ್ರೂಜಿಗೆ ಏರಿಸುವದರಲ್ಲಿನ ಯೆಹೂದಿಗಳ ಪಾತ್ರ ಏನಿತ್ತು ಎಂದು ಸ್ಪಷ್ಟಪಡಿಸುವುದನ್ನು ಅವರು ಬಯಸುವವರಾಗಿದ್ದರು. ಹೊಸ ಒಡಂಬಡಿಕೆಯ ಸಮಯದಲ್ಲಿ ಶಿಲುಬೆಯ ಮೇಲೆ ಸಾಯುವುದಕ್ಕಿಂತ ಇನ್ನೊಂದು ನಾಚಿಕೆಗೇಡಿನ ಸಂಗತಿಯು ಯಾವುದೂ ಇರಲಿಲ್ಲ (ಇಬ್ರಿಯ 6:6; ನೋಡಿರಿ 12:2). ಶಾಸ್ತ್ರಿಗಳು (ಹಿಯಾಳಿಕೆಯಿಂದ) "ಒಂದು ವೇಳೆ ಯೇಸು

ನಿಜವಾಗಿ ಸಂಪೂರ್ಣ ವ್ಯಕ್ತಿ ಎಂದು ನೀವು ಹೇಳಿದ್ದಾದರೆ, ಆತನು ಅಪರಾಧಿಯ ಮರಣಕ್ಕೆ ಏಕೆ ಗುರಿಯಾದನು?" ಎಂದು ಹೇಳುವುದನ್ನು ನಾನು ಊಹಿಸಿ ಕೊಳ್ಳುವವನಾಗಿದ್ದೇನೆ. ಇಂಥ ಪರಿಚ್ಛೇದಗಳನ್ನು ನಾವು ಅಧ್ಯಯನ ಮಾಡುವಾಗ ಈ ಪಾಠವು ನಮಗೆ ಪ್ರಶ್ನೆಗಳಿಗೆ ಉತ್ತರಿಸಲು ಸಹಾಯಮಾಡುವುದಾಗಿದೆ.

ನಾವು ಮೊದಲು ತಿಕ್ಕಾಟದ ಮೂರು ಉದಾಹರಣೆಗಳನ್ನು ಗಮನಿಸುವವರಾಗಿದ್ದೇವೆ. ಆಗ ಈ ವಿರೋಧಕ್ಕೆ ಪ್ರತಿಯಾಗಿ ಇನ್ನೂ ಮುಂದೆ ಹೋಗಿ ಯೇಸು ಪ್ರತಿಕ್ರಿಯಿಸಿದ್ದನ್ನು ನಾವು ನೋಡುವವರಾಗಿದ್ದೇವೆ.

## ಮಾತಿನ ಮೂಲಕ ದ್ವೇಷಕ್ಕೆ ಪ್ರತಿಕ್ರಿಯೆ

ಈ ಪಾಠದಲ್ಲಿ ಸಬ್ಬತ್ತಿನ ಆಚಾರದ ಸುತ್ತಮುತ್ತ ವೈಶಮ್ಯವು ತಿರುಗುವುದಾಗಿದೆ. ಸಬ್ಬತ್ತಿನ ಆರು ವಿವಾದಗಳನ್ನು ಸುವಾರ್ತೆಯು ವಿವರಿಸುವುದಾಗಿದೆ.

"ಸಬ್ಬತ್" ಎಂಬ ಪದದ ಮೂಲ ಅರ್ಥ "ವಿಶ್ರಾಂತಿ" ಎಂದಾಗಿದೆ. ದೇವರು ಜಗತ್ತನ್ನು ಸೃಷ್ಟಿಸಿದಾಗ (ಆದಿಕಾಂಡ 2:1-3), ಆತನು ಏಳನೆಯ ದಿನ ವಿಶ್ರಾಂತಿಯನ್ನು ಪಡೆದು ಅದನ್ನು ಸಬ್ಬತ್ ಎಂದು ಕರೆದು, ಅದನ್ನು ಹತ್ತು ಆಜ್ಞೆಗಳ ಒಂದು ಭಾಗವನ್ನಾಗಿ ಮಾಡಿದನು (ವಿಮೋಚನಕಾಂಡ 20:8-11). ಸಬ್ಬತ್ ವಿಶ್ರಾಂತಿಯ ದಿನವಾಗಿದ್ದು, ದೇವರನ್ನು ಧ್ಯಾನಿಸುವ, ಸಂತೋಷಿಸುವ ಸಮಯವಾಗಿದೆ. ಹೀಗೆ ಸಬ್ಬತ್ತನ್ನು ಆಚರಿಸುವದು ನಿಶ್ಚಿತವಾದುದ್ದು, ಅದನ್ನು ಹಾಳುಮಾಡುವವರಿಗೆ ದೇವರು ಗಂಭೀರವಾದ ಶಿಕ್ಷೆಯನ್ನು ಸೂಚಿಸಿದ್ದಾನೆ (ಅರಣ್ಯಕಾಂಡ 15:32-36; ನೆಹಮೀಯ 13:15-22; ಯೆರಮೀಯ 17:19-27).

ದೇವರ ನಿಯಮಗಳು ಸಾಕಷ್ಟು ಬಿಗುವಾಗಿವೆ, ಆದರೆ ಜನರು ಆ ಕಾರಣಕ್ಕಾಗಿ ಅದನ್ನು ಬಿಡಲು ಸಿದ್ಧರಿರುವುದಿಲ್ಲ. H. I. Hester ರವರು ಬರೆಯುವುದೇನೆಂದರೆ,

> ಈ (ಸಬ್ಬತ್) ದಿನದ ಆಚರಣೆಯ ಪಾಲನೆಯು ಬರಬರುತ್ತಾ ಬಲು ಸಂಕೀರ್ಣಮಯವೂ ಮತ್ತು ಕಷ್ಟಮಯವಾಗುತ್ತಾ ಬಂದಿದೆ. ಮೋಶೆಯ ನಿಬಂಧನೆಗಳು ನೂರಾರು ಆಗುವತನಕ ವಿವರಿಸಲ್ಪಟ್ಟಿವೆ ಮತ್ತು ಹೆಚ್ಚಿಸಲ್ಪಟ್ಟಿವೆ. ಈ ನಿಬಂಧನೆಗಳಲ್ಲಿ ನಿಬಂಧನೆಗಳು ಹಾಸ್ಯಾಸ್ಪದವಾದವುಗಳು ಆಗಿವೆ. ಉದಾಹರಣೆಗಾಗಿ, ಸಬ್ಬತ್ತ್ ದಿನದಂದು ನೈಸರ್ಗಿಕ ಹಲ್ಲನ್ನು ಧರಿಸಿಕೊಳ್ಳುವದು ಅನಗತ್ಯ ಭಾರವನ್ನು ಹೊತ್ತು ಕೊಳ್ಳುವುದರ ಸೂಚನೆಯಾಗಿತ್ತು. ಅದರಂತೆ ಬಿಳಿ ಕೂದಲನ್ನು ಕಿತ್ತುವದು, ಅಥವಾ ಗೋದಿಯ ತೆನೆಯನ್ನು ಕಿತ್ತುವದು, ಅಥವಾ ಎರಡು ಅಕ್ಷರಗಳನ್ನು ಬರೆಯುವದು,[3] ಕೂಡಾ ನಿಷೇದವಾಗಿತ್ತು. ಸಬ್ಬತ್ತನ್ನು ಆಚರಿಸುವುದಕ್ಕೆ ಇಂಥ ಅಸಂಖ್ಯಾತ ನಿಬಂಧನೆಗಳೇ ಮೂಲವಾಗಿದ್ದವುಗಳು ಆಗಿದ್ದು ... ಪ್ರಾಯೋಗಿಕವಾಗಿ ... ಇದು ಅಸಾಧ್ಯವಾದದ್ದಾಗಿದೆ. ಇಂಥ ನಿಬಂಧನೆಗಳ ಮೂಲಕ ಸಬ್ಬತ್ ತನ್ನ ನಿಜವಾದ ಆಚರಣೆಯನ್ನೇ ಕಳಕೊಂಡಿತ್ತು.[4]

"ಅವರು ಸಬ್ಬತ್ತನ್ನು ಮಾನವನಿಗೆ ದೇವರ ವರವಾಗಿ ಮತ್ತು ಜನರನ್ನು ನಿಯಮ ಮತ್ತು ನಿಬಂಧನೆಗಳ ಮನೆಗಳನ್ನಾಗಿ ಪರಿವರ್ತಿಸಿದ್ದಾರೆ."[5] ಎಂದು ವಾರನ್ ವೈರ್ಸ್ಬೆ ಈ ರೀತಿ ಹೇಳುತ್ತಾರೆ.

ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಲು ಯೆಹೂದಿಗಳು ಪ್ರಯತ್ನಿಸಿದಂತೆ ಸಬ್ಬತ್ತಿನ ನಿಯಮಗಳ ಅಸ್ಪಷ್ಟತೆ ಮತ್ತು ಸಂದಿಗ್ಧತೆಯು "ಅವರ ಪ್ರೀತಿಯ ಶಾಸನದ ಭಾಗ" ಎಂದು ಪರಿಣಮಿಸಿದರು.[6] ಅವರ ಸಬ್ಬತ್ತಿನ ನಿಯಮಗಳನ್ನು ಯಾರಿಂದಲೂ ಪರಿಪಾಲನೆಗೊಳ್ಳದೇ ಇರುವುದರಿಂದ (ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ), ಯೇಸುಸುವನ್ನು ಆ ನಿಯಮ ಉಲ್ಲಂಘನೆಯಲ್ಲಿ ಹಿಡಿಯಲು ಯಾವದೇ ಅಡ್ಡಿಯಾಗದು ಎಂದು ಯೋಚಿಸಿದರು ಮತ್ತು

ಇಂಥ ಉಲ್ಲಂಘನೆಗಳು ಮರಣದಂಡನೆಯನ್ನು ತರುವಂತವುಗಳು ಆಗಿದ್ದವು (ನೋಡಿರಿ ಅರಣ್ಯಕಾಂಡ 15:32-36)![7]

**ಸಬ್ಬತ್ ದಿನದಲ್ಲಿ ಕುಂಟನನ್ನು ಸ್ವಸ್ಥಮಾಡಿದ್ದು (ಯೋಹಾನ 5:1-47)**

ನಮ್ಮ ಹಿಂದಿನ ಪಾಠವು ಮುಗಿಯುತ್ತಿದ್ದಂತೆ ಯೇಸು ಶ್ರೇಷ್ಟವಾದ ಗಲಿಲಾಯದ ಸೇವೆಯಲ್ಲಿ ಕಾರ್ಯನಿರತನಾದನು. ಈ ಪಾಠ ಪ್ರಾರಂಭವಾಗುತ್ತಿದಂತೆ ಯೇಸು ತನ್ನ ಕಾರ್ಯಗಳಿಗಾಗಿ ಒಂದು ಅಲ್ಪ ವಿರಾಮವನ್ನು ಕೊಟ್ಟು ಯೆಹೂದ್ಯರ ಒಂದು ಹಬ್ಬಕ್ಕಾಗಿ ಯೆರೂಸಲೇಮಿಗೆ ಹೋದನು (ಯೋಹಾನ 5:1). ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಯೆಹೂದಿ ಗಂಡಸರು ಮುಖ್ಯ ಹಬ್ಬಗಳಾದ - ಪಸ್ಕ ಹಬ್ಬ, ಪಂಚಾಶತ್ತಮ ಹಬ್ಬ ಮತ್ತು ಗುಡಾರಗಳ ಹಬ್ಬಕ್ಕಾಗಿ[8] ವರ್ಷಕ್ಕೆ ಮೂರಾವರ್ತಿ ಯೆರೂಸಲೇಮಿಗೆ ಹೋಗಲೇ ಬೇಕಿತು ಹಾಗೆಯೇ ಯೇಸು ಧರ್ಮಶಾಸ್ತ್ರವನ್ನು ಪಾಲಿಸುವವನಾಗಿದ್ದನು (ಮತ್ತಾಯ 5:17). ಇದು ಯಾವ ಹಬ್ಬವಾಗಿತ್ತು ಎಂಬುದರ ಬಗೆಗೆ ನಮಗೆ ಖಚಿತತೆಯಿಲ್ಲ, ಆದರೆ ಪಸ್ಕಹಬ್ಬವಾಗಿರಬಹುದು.[9] ನಮ್ಮ ಅಧ್ಯಯನ ಉದ್ದೇಶಕ್ಕೋಸ್ಕರ, ಇದನ್ನು ನಾವು ಪಸ್ಕ ಎಂದು ಪರಿಗಣಿಸಿದ್ದೇವೆ.

ಹಿಂದಿನ ಪಸ್ಕದ ಆರಂಭದಲ್ಲಿ, ದೇವಾಲಯದಲ್ಲಿದ್ದ ಧಾರ್ಮಿಕ ವ್ಯಾಪಾರಿಗಳನ್ನು ಓಡಿಸುವುದರ ಮೂಲಕ ಯೇಸು ಯೆಹೂದಿ ಅಧಿಕಾರಿಗಳನ್ನು ಕೆರಳಿಸಿದ್ದನು.[10] ಬೆತ್ಸಥಾ ಕೊಳದ ಬಳಿಯಲ್ಲಿನ ಮನುಷ್ಯನನ್ನು ವಾಸಿಮಾಡುವ ಮೂಲಕ ಆತನು ಅವರನ್ನು ಕೊಪೋದ್ರಿಕ್ತರನ್ನಾಗಿಸಿದ್ದನು. ಯೋಹಾನನು ಈ ಅದ್ಭುತಕಾರ್ಯವನ್ನು ಈ ಮಾತುಗಳಲ್ಲಿ ದಾಖಸಿದ್ದಾನೆ: "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದನು. ಆ ಕ್ಷಣವೇ ಆ ಮನುಷ್ಯನು ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು" (ಯೋಹಾನ 5:8, 9). ಯೋಹಾನನು ನಂತರದಲ್ಲಿ, "ಆದರೆ ಅದು *ಸಬ್ಬತ್ತಾಗಿದ್ದುದರಿಂದ* ..." (9ಬಿ ಒತ್ತಿ ಹೇಳಿದ್ದು ನನ್ನದು) ಎಂಬ ಮಹತ್ತರವಾದ ಹೇಳಿಕೆಯನ್ನು ಇಲ್ಲಿ ಸೇರಿಸಿದ್ದಾನೆ. ರಬ್ಬಿಗಳ ಸಂಪ್ರದಾಯದ ಪ್ರಕಾರ ಸಬ್ಬತ್ ದಿನದಲ್ಲಿ ಒಬ್ಬ ಮನುಷ್ಯನನ್ನು ಹಾಸಿಗೆಯ ಮೇಲೆ ಹೊತ್ತೊಯ್ಯುವದು ನ್ಯಾಯಸಮ್ಮತವಾದದ್ದು (ಅವರ ತರ್ಕದಂತೆ ಆ ಹಾಸಿಗೆಯು "ಪ್ರಾಸಂಗಿಕವಾದುದ್ದು"), ಆದರೆ ಕೇವಲ ಹಾಸಿಗೆಯನ್ನು ಒಯ್ಯುವದು ನ್ಯಾಯಸಮ್ಮತವಾದದ್ದಲ್ಲ.

ಮೊದಲನೆಯದಾಗಿ, ಯೆಹೂದಿನಾಯಕರು ತನ್ನ ಕೈಯಲ್ಲಿ ಹಾಸಿಗೆಯನ್ನು ಹೊತ್ತುಯೂವವನನ್ನು ವಿಚಾರಣೆ ಮಾಡಿದರು; ಆದರೆ ಆ ಹಾಸಿಗೆಯನ್ನು ಹೊತ್ತೊಯ್ಯಲು ಹೇಳಿದವನು ಯೇಸು ಎಂದು ಕಂಡುಹಿಡಿಯಲ್ಪಟ್ಟಾಗ ಅವರ ಆಕ್ರಮಣವು ಆತನೆಡೆಗೆ ತಿರುಗಿತು. ಅವರ ದಾಳಿಯ ಯೇಸುವಿನ ಮೊದಲ ಸಾರ್ವಜನಿಕ ಪ್ರಸಂಗವನ್ನು ಉದ್ರೇಕಿಸಿದ್ದು, ಯೇಸು ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಒತ್ತಾಯಿಸಲ್ಪಟ್ಟ ಮೊದಲ ಕೆಲ ಉದ್ದನೆಯ ಉಪದೇಶಗಳು[11] ಇಲ್ಲಿ ವಿವರವಾಗಿ ದಾಖಲಾಗಿದೆ.

ಈ ಸಂದರ್ಭದಲ್ಲಿ ಯೇಸುವಿನ ಮೂಲ ಸಮರ್ಥನೆಯು ದೇವರು ಸಬ್ಬತ್ ದಿನದಲ್ಲಿ ಕೆಲಸ ಮಾಡುವವನಾಗಿದ್ದಾನೆ, ಆದ್ದರಿಂದ ತಾನೂ ಮಾಡುವವನಾಗಿದ್ದಾನೆ ಎಂಬುದಾಗಿತ್ತು (ವಚನ 17).[12] ಅದಕ್ಕೆ ಆತನು ತಾನು ತನ್ನ ತಂದೆಯೂ ಪಾಲುಗಾರರಾಗಿ ಮಾಡುವ ಕಾರ್ಯಗಳ ವಿವರಣೆಯನ್ನು ಕೊಡುತ್ತಾನೆ (ವಚನಗಳು 19-30). ಯೇಸು "ತನ್ನನ್ನು ದೇವರಿಗೆ ಸರಿಗಟ್ಟಿಕೊಂಡನು" (ವಚನ 18) ಎಂಬುದು ಆತನು ತನ್ನನ್ನು ದೇವರೊಡನೆ ಸೇರಿಸಿಕೊಂಡದ್ದು ಯೆಹೂದ್ಯರನ್ನು ಆಶ್ಚರ್ಯಕ್ಕೀಡು ಮಾಡಿತು! ತಾನು ಯಾರು ಎಂದು ಪ್ರತಿಪಾದಿಸಿದ್ದು ಸರಿಯಾದದ್ದು ಎಂಬುದಕ್ಕೆ ಯೇಸು: "ಸ್ನಾನಿಕನಾದ ಯೋಹಾನ, ಆತನು ಮಾಡಿದ ಅದ್ಭುತ ಕಾರ್ಯಗಳು, ವೇದ ವಾಕ್ಯ ಗಳು ಮತ್ತು ವಿಶೇಷವಾಗಿ ತಾನೇ ದೇವರಾದಂಥ ಸಾಕ್ಷ್ಯಗಳ ಪಟ್ಟಿಯನ್ನೇ ಕೊಟ್ಟನು" (ವಚನಗಳು 31-47). ಈ ಸಂದರ್ಭದಲ್ಲಿ

ಯೇಸುವಿನ ಮಾತುಗಳು ಆತನ ವೈರಿಗಳಿಗೆ ಹೆಚ್ಚಾಗಿ ಆತನು ಮಾಡಿ ತೋರಿಸಿದಂತವುಗಳು ಮತ್ತು ಪರಿಶುದ್ಧಾತ್ಮನ ಪ್ರೇರಣೆಯ ಮಾರ್ಗದರ್ಶನದಂತೆ ಇದ್ದವುಗಳು ಆಗಿದ್ದವು.[13]

ಪ್ರತ್ಯಕ್ಷವಾಗಿ, ಈ ವಿರೋಧದ ನಂತರ ಯೇಸು ಸ್ವಲ್ಪ ದಿನದಲ್ಲೇ ಯೆರೂಸಲೇಮನ್ನು ಬಿಟ್ಟು ಹೊರಟನು. ಕೊನೇಪಕ್ಷ ಯೆರೂಸಲೇಮಿನ ಈ ಪ್ರಯಾಣದ ಬಗೆಗೆ ಯಾವುದೊಂದು ದಾಖಲೆಯು ಇಲ್ಲ.

**ಸಬ್ಬತ್ ದಿನದಲ್ಲಿ ಬೆಳೆಯ ತೆನೆಯನ್ನು ಮುರಿದುಕೊಂಡಿದ್ದು**

**(ಮತ್ತಾಯ 12:1-8; ಮಾರ್ಕ 2:23-28; ಲೂಕ 6:1-5)**

ಯೇಸು ಗಲಿಲಾಯಕ್ಕೆ[14] ಮರಳಿದ ನಂತರ, ಒಂದು ಸಬ್ಬತ್ ದಿನದಂದು ಯೇಸು ಮತ್ತು ಆತನ ಶಿಷ್ಯರು ಕಾಳುಗಳಿಂದ ತುಂಬಿದ ತೆನೆಗಳನ್ನು ಹೊಂದಿದ ಹೊಲದ ಮಧ್ಯದಲ್ಲಿ ಹಾದುಹೋಗುತ್ತಿದ್ದರು, "ಆತನ ಶಿಷ್ಯರು ಹಸಿದು ತೆನೆಗಳನ್ನು[15] ಮುರುದುಕೊಂಡು ತಿನ್ನುತ್ತಿದ್ದರು" (ಮತ್ತಾಯ 12:1). ಶಿಷ್ಯರು "ತೆನೆಗಳನ್ನು ಮುರಿದು ಕೈಗಳಲ್ಲಿ ಹೊಸಕಿಕೊಂಡು ತಿನ್ನುತ್ತಿದ್ದರು" ಎಂದು ಲೂಕನು ಅದಕ್ಕೆ ಸೇರಿಸಿದ್ದಾನೆ (ಲೂಕ 6:1). ಕಾಂಡದ ಮೇಲಿನ ಕಾಳುಗಳು ಹೊಟ್ಟಿನಿಂದ ಮುಸುಕಿದ್ದು ಕಾಳನ್ನು ತಿನ್ನುವ ಮೊದಲು ಇದನ್ನು ತೆಗೆಯಬೇಕಿತ್ತು. ಯೇಸುವಿನ ಶಿಷ್ಯರು ತೆನೆಗಳ ತಲೆಯನ್ನು ಎರಡು ಕೈಯಿಂದ ಹೊಸಕಿ ಅದರ ಹೊಟ್ಟನ್ನು ಸಡಿಲು ಮಾಡುತ್ತಿದ್ದರು. ಅವರು ಹೊಟ್ಟನ್ನು ಊದಿ ತೆಗೆಯುತ್ತಿದ್ದರು ಮತ್ತು ಹಸಿಯಾದ ಕಾಳುಗಳನ್ನು ತಮ್ಮ ಬಾಯಲ್ಲಿ ಎಸೆದುಕೊಳ್ಳುತ್ತಿದ್ದರು.

ಅದನ್ನು ಎತ್ತಿ ಕೊಂಡು, ಹೊಸಕಿ, ಊದುತ್ತಾ ಮತ್ತು ಅಗಿಯುತ್ತಿದ್ದಂತೆಯೇ ಫರಿಸಾಯರು ಗುಂಪು ಒಮ್ಮಲೇ ಅಲ್ಲಿ ಕಾಣಿಸಿಕೊಂಡಿತು ಮತ್ತು ಸಬ್ಬತ್ತ್ ದಿನದ ಆಚರಣೆಯನ್ನು ಮುರಿದಿದ್ದಕ್ಕಾಗಿ ತೆಗಳಲು ಆರಂಭಿಸಿದರು.[16] (ಈ ಸನ್ನಿವೇಶವು ಹಾಸ್ಯದ ಲೇಪನವನ್ನು ಹೊಂದಿದೆ: ಡಾಂಭಿಕರಾದ ಫರಿಸಾಯರು ತಮ್ಮ ಪ್ರಿಯವಾದ ಸಂಪ್ರದಾಯದ ಅತಿಚಿಕ್ಕ ಉಲ್ಲಂಘನೆಗಾಗಿ ಯೇಸುವಿನ ಮೇಲೆ ಬೀಳಲು ಕಾಯುತ್ತಾ ಪೈರಿನ ಹೊಲದಲ್ಲಿ ತಮ್ಮ ಸಾಲಂಕೃತವಾದ ನಿಲುವಂಗಿಯಲ್ಲಿ ಸೆರೆದುಕೊಂಡು ಅಡಗಿಕೊಂಡು ನಿಂತಿದ್ದರು!)

ಅಲ್ಲಿರುವ ದೂರು ಅವರು ಮತ್ತೊಬ್ಬರ ಹೊಲದ ಪೈರನ್ನು ಕದ್ದಿದ್ದಾರೆ ಎಂದಲ್ಲ. ದಾರಿ ಹೋಕರು ಹೊಲದ ಪೈರನ್ನು ಕಿತ್ತು ಮತ್ತು ತಿನ್ನುವದಕ್ಕೆ ನಿಯಮದ ಪ್ರಕಾರ ಅವಕಾಶವಿತ್ತು (ಧರ್ಮೋಪದೇಶಕಾಂಡ 23:25). ಅಲ್ಲಿರುವ ದೂರು ಎಂದರೆ ಆ ಕಾರ್ಯದ ಬಗೆಗೆ ಸಬ್ಬತ್ತಿನ ನಿಯಮದ ಉಲ್ಲಂಘನೆಯು ಆದಾಗಿತ್ತು. ಫರಿಸಾಯರ ಪ್ರಕಾರ, ಕೆಲ ತೆನೆಗಳನ್ನು ಆರಿಸಿಕೊಳ್ಳುವದು, ಸುಗ್ಗಿಗೆ ಸಮಾನವಾದುದ್ದು, ಕಾಳುಗಳನ್ನು ತಿಕ್ಕುವದು ಒಕ್ಕುವದಕ್ಕೆ ಸಮಾನವಾದುದು, ಮತ್ತು ತೆನೆಗಳನ್ನು ತಿನ್ನುವದು ಬೀಸುವದಕ್ಕೆ ಸಮಾನವಾದುದೂ ಆಗಿತ್ತು. (ಸಬ್ಬತ್ತ್ ದಿನದಲ್ಲಿ ನಿಷೇದವಾದಂತಹ "ಆಹಾರದ ಸಿದ್ಧಪಡಿಸುವಿಕೆಯನ್ನು" ಶಿಷ್ಯರು ಮಾಡಿದರು ಎಂಬುದನ್ನೂ ಸಹ ಅವರು ಸೇರಿಸಲು ಬಹುದು.)

ಯೇಸು ಯೆರೂಸಲೇಮಿನಲ್ಲಿ ಪ್ರಸ್ತುತ ಪಡಿಸಿದ್ದಕ್ಕಿಂತಲೂ ವಿಭಿನ್ನವಾಗಿ ಈ ಸಂದರ್ಭವನ್ನು ಸಮರ್ಥಿಸಿಕೊಂಡನು. ಕೊನೆಯಲ್ಲಿ ಆತನು "ಅವರು ನಿರಪರಾಧಿಗಳನ್ನು" ಅವರು ದೂಷಿಸುತ್ತಿದ್ದಾರೆ ಎಂದು ಹೇಳಿದನು (ಮತ್ತಾಯ 12:7). ಇನ್ನೊಂದು ಮಾತಿನಲ್ಲಿ ಯೇಸು "ದೋಷವಿಲ್ಲದವರು" ಎಂದು ವಾದಿಸಿದನು. ಆತನು ಅದನ್ನು ಐದು ತಳಹದಿಯ ಆಧಾರದ ಮೇಲೆ ವಾದಿಸಿದನು:

(1) "ದೋಷವಿಲ್ಲದವರು" ಯಾಕೆಂದರೆ ದಾವೀದನೂ ಮತ್ತು ಅವನ ಸಂಗಡ ಇದ್ದವರೂ ಹಸಿದಾಗ ಗುಡಾರದಲ್ಲಿದ್ದ ಮೀಸಲು ರೊಟ್ಟಿಯನ್ನು ತಿಂದು ತಮ್ಮ ಹಸಿವನ್ನು ಹಿಂಗಿಸಿಕೊಂಡಾಗ ಆತನು ದೋಷಿ ಎಂದೆಣಿಸಲಿಲ್ಲ (ಮತ್ತಾಯ 12:3, 4; ಲೂಕ 6:3, 4; ನೋಡಿರಿ 1 ಸಮುವೇಲ 21:6; ಯಾಜಕಕಾಂಡ 24:5-9).[17]

(2) "ದೋಷವಿಲ್ಲದವರು" ಯಾಕೆಂದರೆ ಸಬ್ಬತ್ ದಿನದಲ್ಲಿ ಕೆಲಸ ಮಾಡಿದ್ದಕ್ಕಾಗಿ ಯಾಜಕರು ತಪ್ಪಿತಸ್ಥರು ಎಂದು ನಿರ್ಣಯಿಸಲ್ಪಡಲಿಲ್ಲ (ಮತ್ತಾಯ 12:5; ನೋಡಿರಿ ಅರಣ್ಯಕಾಂಡ 28:9, 18, 19). ಯಾಜಕರಿಗೆ ಸಬ್ಬತ್ ದಿನವು ತುಂಬಾ ಕೆಲಸವುಳ್ಳ ದಿನವಾಗಿರುತ್ತಿತ್ತು.

(3) ''ದೋಷವಿಲ್ಲದವರು'' ಯಾಕೆಂದರೆ ಸಬ್ಬತ್ ಆಶೀರ್ವಾದವನ್ನು ಸೂಚಿಸುವಾದಗಿಯೇ ಹೊರತು ಹೊರೆಯನ್ನಲ್ಲ: "ಸಬ್ಬತ್‌ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ" (ಮಾರ್ಕ 2:27). ಸಬ್ಬತ್ ದಿನದಂದು ಶಿಷ್ಯರ ಸರಳವಾದ ಆಹಾರವು ಅನುಚಿತವಾದ ಹೊರೆಯನ್ನು ಅವರಿಗೆ ತಂದಿತ್ತು.

(4) "ದೋಷವಿಲ್ಲದವರು" ಯಾಕೆಂದರೆ ಕಷ್ಟದ ಶಮನವು (ಹಸಿವನ್ನು ಹಿಡಿದು) ಶುದ್ಧಾಚಾರಗಳನ್ನು (ವಿಶೇಷವಾಗಿ ಮಾನವ ನಿರ್ಮಿತ ಶುದ್ಧಾಚಾರಗಳು) ಪೂರ್ಣ ಗೊಳಿಸುವುದಕ್ಕಿಂತ ಮಹತ್ವವಾದದ್ದಾಗಿದೆ ಎಂದು ಹೊಶೆಯ 6:6ರಲ್ಲಿ ಬೋಧಿಸಲಾಗಿದೆ: "ನನಗೆ ಯಜ್ಞವು ಬೇಡ, ಕರುಣೆಯೇ ಬೇಕು"[18] ಎಂಬ ಹೋಶೆಯನ ಬೋಧನೆಗಳನ್ನು ಯೇಸು ತನ್ನ ನಿಂದನಾಕಾರರಿಗೆ ನೆನಪಿಸುವವನಾಗಿದ್ದಾನೆ (ಮತ್ತಾಯ 12:7).

(5) "ದೋಷವಿಲ್ಲದರು" ಯಾಕೆಂದರೆ ಮಾನವನ ಸಂಪ್ರದಾಯಗಳಿಗೆ ಮೆಸ್ಸೀಯನು ವಸ್ತುವಾಗಲಾರನು. ಫರಿಸಾಯರನ್ನು ಕಳೆಗುಂದುವಂತೆ ಮಾಡುವ ಎರಡು ಹೇಳಿಕೆಗಳನ್ನು ಇಲ್ಲಿ ಹೇಳುತ್ತಾನೆ: "ಆದರೆ ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು ನಿಮಗೆ [ಅಥವಾ ಒಬ್ಬನಿಗೆ[19]] ಹೇಳುತ್ತೇನೆ"[20] (ಮತ್ತಾಯ 12:6); "ಮನುಷ್ಯ ಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ" (ಮತ್ತಾಯ 12:8; ಓದಿರಿ ಮಾರ್ಕ 2:28; ಲೂಕ 6:5). ಯೇಸು ನಿಶ್ಚಿಯವಾಗಿ ತನ್ನನ್ನೇ ಸೂಚಿಸುವವನಾಗಿದ್ದಾನೆ. ಸಬ್ಬತ್ತಿಗೆ ಸಂಬಂಧಿಸಿದಂತೆ ಹಳೆಯ ಒಡಂಬಡಿಕೆಯ ನಿಯಮಗಳ ಚೌಕಟ್ಟಿನ ಅಡಿಯಲ್ಲಿ ಏನಾಗಬೇಕು ಅಥವಾ ಏನಾಗಬೇಕಿಲ್ಲ ಎಂದು ನಿರ್ಧರಿಸುವ ಅಧಿಕಾರವು ಆತನಿಗಿದೆ, ಹೊರತು ಅವರಿಗಿಲ್ಲ.

ಫರಿಸಾಯರು ಕೋಪದಿಂದ ತುಂಬಿದವರಾಗಿ, ತಮ್ಮ ತಮ್ಮಲ್ಲಿ ಗೊಣಗಾಡುತ್ತಾ ಹೊರಟು ಹೋದರು.

### ಸಬ್ಬತ್ ದಿನದಲ್ಲಿ ಕೈಬತ್ತಿದವನನ್ನು ವಾಸಿಮಾಡಿದ್ದು
### (ಮತ್ತಾಯ 12:9-14; ಮರ್ಕ 3:1-6; ಲೂಕ 6:6-11)

ತದನಂತರ ಕೆಲ ದಿನಗಳಲ್ಲಿ,[21] "ಮತ್ತೊಂದು ಸಬ್ಬತ್ ದಿನದಲ್ಲಿ" ಸಭಾಮಂದಿರಕ್ಕೆ ಹೋಗಿ ಉಪದೇಶ ಮಾಡುವ ಅವಕಾಶವು ಯೇಸುವಿಗೆ ಸಿಕ್ಕಿತು (ಲೂಕ 6:6). ಆತನನ್ನು ಪೈರಿನ ಹೊಲದಲ್ಲಿ ತಪ್ಪಿತಸ್ಥನನ್ನಾಗಿಸಲು ಪ್ರಯತ್ನಿಸುತ್ತಿರುವ ಫರಿಸಾಯರನ್ನು ಸೂಚಿಸಲು ಮತ್ತಾಯ ವಿವರಣೆಯಂತೆ ಆತನು "*ಅಲ್ಲಿಂದ* ಹೊರಟು ಸಭಾಮಂದಿರಕ್ಕೆ ಹೋದನು" (ಮತ್ತಾಯ 12:9; ಒತ್ತಿ ಹೇಳಿದ್ದು ನನ್ನದು).

ಆ ಸಭೆಯಲ್ಲಿ "... ಕೈ ಬತ್ತಿದವನೊಬ್ಬನಿದ್ದನು" (ಮತ್ತಾಯ 12:10). (ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಲು ಆತನು ಕ್ರಿಸ್ತನ ವೈರಿಗಳಿಂದ ತರಲ್ಪಟ್ಟವನಾಗಿರ ಬಹುದೇ?) ಫರಿಸಾಯರು ಕೆಲಕ್ಷಣಗಳವರೆಗೆ ಕಾದು "[ಯೇಸು] ಸಬ್ಬತ್ ದಿನದಲ್ಲಿ ಅವನನ್ನು ಸ್ವಸ್ಥ ಮಾಡುವನೋ ಏನೋ ಎಂದು ಅವನನ್ನು ಹೊಂಚಿ ನೋಡುತ್ತಾ ಇದ್ದರು"[22] (ಮಾರ್ಕ 3:2). ಕೊನೆಗೆ ಅವರಿಗೆ ಬಹು ಸಮಯ ಕಾಯಲಾಗಲಿಲ್ಲ ಮತ್ತು ಕ್ರಿಸ್ತನ ಬೋಧನೆಯ ಮಧ್ಯ ಪ್ರವೇಶಿಸಿ "ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ?" (ಮತ್ತಾಯ 12:10) ಎಂದು ಮತಿ ಹೀನರಾಗಿ ಮಾತನಾಡತೊಡಗಿದರು.

ಯೇಸು ಅದಕ್ಕೆ ಬೆದರಲಿಲ್ಲ. ಆಮೇಲೆ ಕೈ ಬತ್ತಿದ ಮನುಷ್ಯನಿಗೆ "ಎದ್ದು ನಡುವೆ ಬಾ!"

ಎಂದು ಹೇಳಿದನು (ಮಾರ್ಕ 3:3). ಆ ಮನುಷ್ಯನೊಡನೆ ಸಭೆಯ ಮುಂದೆ ನಿಂತುಕೊಂಡು, ಕ್ರಿಸ್ತನು ತನ್ನನ್ನು ಪ್ರಶ್ನಿಸುವವರಿಗೆ "ಸಬ್ಬತ್ ದಿನದಲ್ಲಿ ಯಾವುದನ್ನು ಮಾಡುವದು ನ್ಯಾಯ? ಪ್ರಾಣವನ್ನು ಉಳಿಸುವದೋ, ತೆಗೆಯುವದೋ?"[23] (ಲೂಕ 6:9) ಎಂದು ಕೇಳಿದನು. ಎಲ್ಲಕ್ಕೂ ಸಂಬಂಧಿತವಾಗುವ ಒಂದು ಸರಳವಾದ ಉದಾಹರಣೆಯನ್ನು ಆತನು ಬಳಸಿದನು:

> ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿಯು ಇದ್ದು ಅದು ಸಬ್ಬತ್ತ್ ದಿನದಲ್ಲಿ ಕುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೇ?[24] ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚು ಆದಕಾರಣ ಸಬ್ಬತ್ ದಿನದಲ್ಲಿ ಒಳ್ಳೆ ಕೆಲಸವನ್ನು ಮಾಡುವದು ತಕ್ಕದ್ದೆ ಸರಿ ಎಂದು ಉತ್ತರಕೊಟ್ಟನು (ಮತ್ತಾಯ 12:11, 12).

ಹೃದಯವಿಲ್ಲದ ಆತನ ವೈರಿಗಳು ಕರುಣೆಯ ಕೊರಣೆಯಿಂದ ಇದ್ದಾಗ (ಮಾರ್ಕ 3:5), ಯೇಸು ಆ ಮನುಷ್ಯನಿಗೆ "ನಿನ್ನ ಕೈ ಚಾಚು!" ಎಂದು ಹೇಳಿದನು (ಮತ್ತಾಯ 12:13). "ಅವನು ಚಾಚಿದನು ಅದು ಸಂಪೂರ್ಣವಾಗಿ ವಾಸಿಯಾಗಿ ಮತ್ತೊಂದರ ಹಾಗಾಯಿತು" (ವಚನ 13). ಇದು ಎಲ್ಲರೂ ಕಾಣುವಂಥ ಅದ್ಭುತಕಾರ್ಯವಾಗಿತ್ತು!

ಆತನ ವೈರಿಗಳು (ತಿರುಗಿ) ಮೌನಿಗಳಾದರು, ಆದರೆ ಅವರು ತಮ್ಮ ಸೋಲನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅವರು "ಹೊರಕ್ಕೆ ಹೋಗಿ ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನ ವಿರೋಧವಾಗಿ ಆಲೋಚನೆ ಮಾಡಿಕೊಂಡರು" (ಮತ್ತಾಯ 12:14). "ಫರಿಸಾಯರು ಹೊರಕ್ಕೆ ಹೋಗಿ ಕೂಡಲೇ ಹೆರೋದ್ಯರನ್ನು ಕೂಡಿಕೊಂಡು ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು" (ಮಾರ್ಕ 3:6) ಎಂದು ಮಾರ್ಕನು ಹೆಚ್ಚು ಕಡಿಮೆ ನಂಬಲು ಸಾಧ್ಯವಾದ ವಿವರಣೆಯನ್ನು ಇದಕ್ಕೆ ಸೇರಿಸಿದ್ದಾನೆ. ಫರಿಸಾಯರು ಹೆರೋದ್ಯರನ್ನು *ಅಲ್ಲಗಳೆಯುವವರಾಗಿದ್ದರು,*[25] ಆದರೆ ಕ್ರಿಸ್ತನನ್ನು ಸುಮ್ಮನಾಗಿಸಲು ಅವರ ರಾಜಕೀಯ ಪ್ರಭಾವವು ತಮಗೆ ಅವಶ್ಯವಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿದಿದ್ದರು. ಅವರು ಹೆರೋದ್ಯರನ್ನು ದ್ವೇಷಿಸುವವರಾಗಿದ್ದರು, ಆದರೆ ಯೇಸುವನ್ನು ಅದಕ್ಕಿಂತ ಹೆಚ್ಚಾಗಿ ದ್ವೇಷಿಸುವವರಾದರು.

ಸಬ್ಬತ್ತಿನ ವಿವಾದದ ಈ ಭಾಗವನ್ನು ಮುಗಿಸುವ ಮುನ್ನ, ಯೇಸು ದೇವರ ನಿಯಮವನ್ನು ಎಂದಿಗೂ ಮುರಿಯಲಿಲ್ಲ ಅಥವಾ ಹಾಗೆ ಮಾಡಲು ಯಾರೊಬ್ಬರನ್ನೂ ಪ್ರೋತ್ಸಾಹಿಸಲಿಲ್ಲ ಎಂದು ನಾನು ಒತ್ತಿ ಹೇಳುವವನಾಗಿದ್ದೇನೆ. ಸ್ವಚಿತ್ತಕ್ಕಾಗಿ, ಹೇಗೋ ವರ್ಷದುದ್ದಕ್ಕೂ ಬೆಳೆದ ಮಾನವ ನಿರ್ಮಿತ ಸಂಪ್ರದಾಯಗಳನ್ನು ಆತನು ಉಲ್ಲಂಘಿಸಿದನು ಮತ್ತು ಇದು ಆತನ ವೈರಿಗಳನ್ನು ಉದ್ರಿಕ್ತರನ್ನಾಗಿಸಿತು. ನಮ್ಮ ಅಧ್ಯಯನದಲ್ಲಿ ಯೇಸುವಿನ ಸಾರ್ವಜನಿಕ ಸೇವೆಯ ಅರ್ಧಭಾಗವನ್ನೂ ಕೂಡಾ ನಾವು ಮುಟ್ಟಿಲ್ಲ ಮತ್ತು ಆತನ ವೈರಿಗಳು ಆತನನ್ನು ಮತ್ತು ಆತನ ಪ್ರಭಾವವನ್ನು ನಾಶಮಾಡಲು ಹಲಗಲು ರಾತ್ರಿ ಕೆಲಸಮಾಡುತ್ತಿದ್ದರು! J. W. McGarvey ಬರೆಯುವಂತೆ, "ಈ ವಿಷಯದಿಂದ ಯೇಸುವಿನ ಜೀವಿತದ ವಿರುದ್ಧದ ಕಾರಸ್ಥಾನದ ರಕ್ತಗೆಂಪು ಸುವಾರ್ತೆಯುದ್ಧಕ್ಕೂ ಸಾಗಿದೆ."[26]

## ಕಾರ್ಯದೊಂದಿಗೆ ಪ್ರತಿಕ್ರಯಿಸಿದ ದ್ವೇಷ

ಸಬ್ಬತ್ತ್ ವಿವಾದದ ಮೂರು ಪ್ರತಿಕ್ರಿಯೆಗಳಲ್ಲಿ, ಯೇಸು ಎರಡು ಮಹತ್ವದ ಹೆಜ್ಜೆಗಳನ್ನು ತೆಗೆದುಕೊಂಡನು.

### ಆತನ ವೈರಿಗಳಿಂದ ಬೇರ್ಪಡುವಿಕೆ (ಮತ್ತಾಯ 12:13-21; ಮಾರ್ಕ 3:7-12)

ಮೊದಲು ಯೇಸು ಮುಂಬಲಿರುವ ವಿವಾದಗಳನ್ನು ದೂರವಿರಿಸಲು ತನ್ನನ್ನು ತಾನು ತನ್ನ

ವೈರಿಗಳಿಂದ ಬೇರ್ಪಡಿಸಿಕೊಂಡನು. ಮತ್ತಾಯನ ವಿವರಣೆಯ ನಂತರ ದಾಖಲಾದುದೆಂದರೆ ಫರಿಸಾಯರು "ಹೊರಕ್ಕೆ ಹೋಗಿ ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು" (ಮತ್ತಾಯ 12:14), ನಂತರ ಇದು ಹೇಳುವುದೇನೆಂದರೆ "ಯೇಸು ಅದನ್ನು ತಿಳಿದು ಅಲ್ಲಿಂದ ಹೊರಟು ಹೋದನು" (ಮತ್ತಾಯ 12:15). ಅಲ್ಲಿನ ಗಲಾಟೆಯನ್ನು ನಿವಾರಿಸುವ ಯತ್ನದಲ್ಲಿ ಇದು ಯೇಸುವಿನ ಮೊದಲ ಹಿಂತೆಗೆದು ಕೊಳ್ಳುವಿಕೆ ಆಗಿತ್ತು.

ಯೇಸು ತನ್ನ ಶಿಷ್ಯರ ಕೂಡ ಆ ಸ್ಥಳವನ್ನು ಬಿಟ್ಟು ಸಮುದ್ರದ [ಅದು ಗಲಿಲಾಯ ಸಮುದ್ರ] ಬಳಿಗೆ ಹೋದನು (ಮಾರ್ಕ 3:7). ಅಲ್ಲಿಯೂ ಕೂಡಾ ಜನರು ಅವನನ್ನು ಕಂಡುಕೊಂಡರು: "... ಗಲಿಲಾಯದಿಂದ ಬಹು ಜನರು ಆತನ ಹಿಂದೆ ಹೋದರು. ಇದಲ್ಲದೆ ಆತನು ಇಂತಿಂಥದನ್ನು ಮಾಡುತ್ತಾನೆಂದು ಕೇಳಿದ ಬಹು ಜನರು ಯೂದಾಯದಿಂದಲೂ ಯೆರೂಸಲೇಮಿನಿಂದಲೂ ಇದುಮಾಯದಿಂದಲೂ[27] ಯೋರ್ದನ್ ಹೊಳೆಯ ಆಚೆಯಿಂದಲೂ ತೂರ್ ಸಿದೋನ್ ಪಟ್ಟಣಗಳ ಸುತ್ತಲಿಂದಲೂ ... ಬಂದರು"[28] (ಮಾರ್ಕ 3:7ಬಿ, 8). ಯೇಸು ಜನರಿಗೆ ಬೋಧಿಸುತ್ತಿದ್ದನು,[29] ಅವರ ರೋಗಗಳಿಂಗ ಅವರನ್ನು ಬಿಡಿಸುತ್ತಿದ್ದನು ಮತ್ತು ಅವರ ದೆವ್ವಗಳನ್ನು ಬಿಡಿಸುತ್ತಿದ್ದನು; ಆದರೆ ತಾನು ಅವರಿಗೆ ಮಾಡಿದ್ದನ್ನು ಯಾರಿಗೂ ಪ್ರಕಟಿಸಬಾರದೆಂದು ಅವರಿಗೆ ಬಹು ಖಂಡಿತವಾಗಿ ಹೇಳುತ್ತಿದ್ದನು (ಮತ್ತಾಯ 12:15, 16; ನೋಡಿರಿ ಮಾರ್ಕ 3:11, 12). ಅದಕ್ಕೆ ಹೊಂದಿಕೊಂಡ ಪ್ರಚಾರವು ಆತನನ್ನು ದ್ವೇಷಿಸುವವರಿಗೆ ಕೋಪವನ್ನೆಬ್ಬಿಸಿತು.

ಸಂಭವಿಸಿದ ಪ್ರತಿಯೊಂದು ಸಂಗತಿಗಳು ಪ್ರವಾದನೆಯನ್ನು ಪೂರ್ಣಗೊಳಿಸುವುದಕ್ಕೆ ಆದವುಗಳು ಎಂದು ಮತ್ತಾಯನು ಒತ್ತಿ ಹೇಳಿದ್ದಾನೆ (ಮತ್ತಾಯ 12:17-21; ನೋಡಿರಿ ಯೆಶಾಯ 42:1-4); ಯೇಸು ಆ ಪಟ್ಟಣದಿಂದ ಹೊರಟು ಹೋದನು ಮತ್ತು ಮೌನದಿಂದ ಮಾತುಗಳನ್ನು ಸಂಪೂರ್ಣಗೊಳಿಸುವ ಸೂಚನೆಗಳನ್ನು ಆತನು ಕೊಡುತ್ತಾನೆ. "ಆತನು ಜಗಳವಾಡುವುದಿಲ್ಲ, ಕೂಗಾಡುವುದಿಲ್ಲ; ಬೀದಿಗಳಲ್ಲಿ ಈತನ ಧ್ವನಿಯು ಯಾರಿಗೂ ಕೇಳಿಸುವುದಿಲ್ಲ" (ಮತ್ತಾಯ 12:19). ಆತನು ರೋಗಿಯನ್ನು ಸ್ವಸ್ಥಮಾಡುವಿಕೆ ಮತ್ತು "ಜಜ್ಜಿದ ದಂಟಿ" ನಂತಿರುವವರಿಗೆ ಅಥವಾ ಶಕ್ತಿ ಮುರಿದು ಹೋಗಿರುವಂತವರಿಗೆ ತನ್ನ ಕಾಳಜಿ ತೋರಿಸುವವನಾಗಿದ್ದಾನೆ (ವಚನ 20). ಪಾಲೆಸ್ತಿನಿನ ಹೊರಗಿನಿಂದ ಬರುವ ಜನರು (ಇದುಮಾಯ, ತೂರ್, ಸಿದೇನ್‌ದಿಂದ) ಅನ್ಯಜನರಿಗೆ ಯೇಸುವಿನ ಸೇವೆಯ ಮಹತ್ವವನ್ನು ಒತ್ತಿ ಹೇಳುವವರಾಗಿದ್ದರು (ಮತ್ತಾಯ 12:18, 21).

ಯೇಸು ಬೋಧಿಸುವುದನ್ನೂ ಸ್ವಸ್ಥಮಾಡುವುದನ್ನೂ ಮುಂದುವರೆಸಿದನು, ಅದರ ಹಾಗೆಯೇ ಯೆಹೂದಿ ನಾಯಕರ ಪ್ರತಿಭಟನೆಯಿಂದ ತಪ್ಪಿಸಿಕೊಳ್ಳಲು ತನ್ನ ಮಾರ್ಗವನ್ನು ಸಹ ಬಿಟ್ಟುಹೊರಗೆ ಬಂದನು.

### ಆತನ ಹಿಂಬಾಲಕ ಆಯ್ಕೆ (ಮತ್ತಾಯ 10:2-4; ಮಾರ್ಕ 3:13-19; ಲೂಕ 6:12-16)

ಬೆಳೆಯುತ್ತಿರುವ ದ್ವೇಷಕ್ಕೆ ಪ್ರತಿಕ್ರಿಯಿಸುತ್ತಾ ಯೇಸು ತಾನು ಹೋದ ಮೇಲೆ ತನ್ನ ಕೆಲಸವನ್ನು ಮುನ್ನಡಿಸಿಕೊಂಡು ಹೋಗುವುದಕ್ಕಾಗಿ ಹನ್ನೆರಡು ಮಂದಿಯನ್ನು ಆರಿಸಿದನು.[30] ಆತನ ದಿನಗಳು ನಿಶ್ಚಿತವಾಗಿಯೂ ಕ್ವಚಿತ್ತಾಗಿದ್ದವು ಮತ್ತು ಆತನ ಮರಣಕ್ಕೂ ಮುಂಚೆ ವಿಶೇಷ ವ್ಯಕ್ತಿಗಳು ತರಬೇತಿ ಹೊಂದುವದು ಅತ್ಯಗತ್ಯವಾಗಿತ್ತು. "ಆತನು ಹನ್ನೆರಡು ಮಂದಿಯನ್ನು ಆರಿಸಿ ಅವರು ತನ್ನ ಸಂಗಡ ಇರಬೇಕೆಂತಲೂ ... ಸುವಾರ್ತೆಯನ್ನು ಸಾರುವುದಕ್ಕೆ ಅವರನ್ನು ಕಳುಹಿಸುವೆನೆಂತಲೂ" ಅವರು ಆರಿಸಲ್ಪಟ್ಟರು ಎಂದು ಮಾರ್ಕನು ವಿವರಿಸುತ್ತಾನೆ (ಮಾರ್ಕ 3:14). ಅವರು ಆತನೊಡನೆ ಪ್ರಯಾಣಿಸುತ್ತಿದ್ದರು ಆತನ ಬೋಧನೆ ಮತ್ತು ಉದಾಹರಣೆಗಳಿಂದ ಕಲಿಯುತ್ತಿದ್ದರು. ಆತನು ಅವರನ್ನು ವಿಶೇಷ ಸೇವೆಗಾಗಿ

ಕಳುಹಿಸುತ್ತಿದ್ದನು ಆದ್ದರಿಂದ ಅವರು ಅನುಭವವನ್ನು ಪಡೆಯಬಹುದಿತ್ತು. ಹೀಗೆ ಅವರು ಕಲಿತಿರಬಹುದು ಹಾಗೂ ತರಬೇತಿಗೊಂಡಿರಬಹುದು. ಈ ಸಮಯದಿಂದ ಕ್ರಿಸ್ತನ ಹೆಚ್ಚಾದ ಶ್ರಮವು ಅಪೊಸ್ತಲರನ್ನಾಗಿಸುವುದಕ್ಕೆ ಸಿದ್ಧಪಡಿಸುವುದಕ್ಕೆ ನಿರ್ದೇಶಿಸುವುದೇ ಆಗಿತ್ತು.

ಹನ್ನೆರಡು ಮಂದಿಯನ್ನು ಆರಿಸುವದು ದೇವರನ್ನು ವಿಚಾರಿಸದೇ ಮಾಡಿದ್ದಾಗಿರಲಿಲ್ಲ, ಯೇಸು ತನ್ನ ನಿರ್ಧಾರ ಕೈಕೊಳ್ಳುವ ಮೊದಲು ಆತನು "ಪ್ರಾರ್ಥನೆ ಮಾಡುವುದಕ್ಕಾಗಿ ಬೆಟ್ಟಕ್ಕೆ[31] ಹೋಗಿ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲಿ ಕಳೆದನು" (ಲೂಕ 6:12). ಎಲ್ಲಾ ನಿರ್ಧಾರಗಳು ಪ್ರಾರ್ಥನೆಯ ಮೂಲಕ ಮುಂದೆ ಸಾಗುತ್ತಿದ್ದವು.

ಯೇಸು ಅಸಂಖ್ಯಾತ ಪೂರ್ಣಸಮಯದ ಶಿಷ್ಯ ಸಮೂಹವನ್ನು[32] ತನ್ನ ಸುತ್ತಲೂ ಹೊಂದಿದ್ದನು. ರಾತ್ರಿಯ ಪ್ರಾರ್ಥನೆಯ ನಂತರ ಆತನು ಅವರನ್ನು ಹತ್ತಿರಕ್ಕೆ ಕರೆದು "ಅವರಲ್ಲಿ ಹನ್ನೆರಡುಮಂದಿಯನ್ನು ಆರಿಸಿಕೊಂಡನು" (ಲೂಕ 6:13). ಆತನು ಅವರನ್ನು "ಅಪೊಸ್ತಲರೆಂದು" ಹೆಸರಿಟ್ಟನು (ವಚನ 13ಬಿ; ನೋಡಿರಿ ಮತ್ತಾಯ 10:2). "ಅಪೋಸ್ತಲರು" ಎಂದರೆ "ಕಳುಹಿಸಲ್ಪಟ್ಟ ಒಬ್ಬನು" ಎಂದರ್ಥ. ಸಾಮಾನ್ಯವಾಗಿ ವಿಶೇಷ ಸೇವೆಗೆ,[33] ಕಳುಹಿಸಲ್ಪಡುವ ಒಬ್ಬನನ್ನು ಸೂಚಿಸಲು ಈ ಪದವು ಬಳಸಲ್ಪಡುತ್ತಿತ್ತು, ಆದರೆ ಈ ಹನ್ನೆರಡು ಜನರನ್ನು ಯೇಸು ತಾನೇ ನಿಯೋಜಿಸಿದ್ದರಿಂದ ಇದು ಇನ್ನಷ್ಟು ಮಹತ್ವವನ್ನು ಪಡೆದಿದೆ.

*ಹನ್ನೆರಡು* ಜನರನ್ನು ಆರಿಸಿದ ವಾಸ್ತವವು ಬಹುಶಃ ಮಹತ್ವದ್ದಾಗಿರಬಹುದು; "ಹನ್ನೆರಡು" ಈ ಸಂಖ್ಯೆಯು ಯೆಹೂದಿಗಳಲ್ಲಿ ವಿಶೇಷಾರ್ಥವನ್ನು ಹೊಂದಿದೆ, ಇಬ್ರಿಯರು ಯೋಚಿಸುವಂತೆ ಇದು ಧಾರ್ಮಿಕ ಸಂಪೂರ್ಣತೆಯನ್ನು ಸೂಚಿಸುವುದಾಗಿದೆ ಎಂದು ಇಬ್ರಿಯರು ಯೋಚಿಸುವವರಾಗಿದ್ದಾರೆ. ಅಲ್ಲಿ ಹನ್ನೆರಡು ಮೂಲಪಿತೃಗಳು, ಇಸ್ರಾಯೇಲ್ಯರ ಹನ್ನೆರಡು ಕುಲಗಳು ಇದ್ದವು; ಈಗ ಯೇಸು ಹನ್ನೆರಡು ಜನ ಅಪೋಸ್ತಲರನ್ನು ಆರಿಸಿಕೊಂಡಿದ್ದಾನೆ.[34]

ಮಾರ್ಕನು ಸಿದ್ಧಪಡಿಸಿದ ಅಪೊಸ್ತಲರ ಪಟ್ಟಿಯ ಈ ರೀತಿಯಲ್ಲಿ ಇದೆ:

> ... ಸಿಮೋನ (ಎಂಬವನಿಗೆ ಪೇತ್ರನೆಂದು ಹೆಸರನ್ನು ಇಟ್ಟನು ಜೆಬೆದಾಯನ ಮಗನಾದ ಯಾಕೋಬನಿಗೂ ಯಾಕೋಬನ ತಮ್ಮನಾದ ಯೋಹಾನನಿಗೂ ಬೋವೆರ್ಗೆಸ್ ಎಂದರೆ ಗುಡುಗಿನಮರಿಗಳು[35] ಎಂದು ಹೆಸರಿಟ್ಟನು); ಮತ್ತು ಆಂದ್ರೇಯ, ಫಿಲಿಪ್ಪ, ಬಾರ್ತಲೋಮಾಯ, ಮತ್ತಾಯ, ತಮ ಅಲ್ಫಾಯನ ಮಗನಾದ ಯಾಕೋಬ, ತದ್ದಾಯ, ಮತಾಭಿಮಾನಿ ಎಂದು ಹೆಸರುಗೊಂಡ ಸಿಮೋನ, ಯೇಸುವನ್ನು ಹಿಡುಕೊಟ್ಟ ಇಸ್ಕರಿಯೋತ ಯೂದ[36] ಇವರೇ (ಮಾರ್ಕ 3:16-19).[37]

ಲೂಕನ ಪಟ್ಟಿಯು ಇಲ್ಲಿದೆ:

> ಆತನಿಂದ ಪೇತ್ರನೆಂಬ ಹೆಸರನ್ನು ಹೊಂದಿದ ಸಿಮೋನ, ಅವನ ತಮ್ಮನಾದ ಆಂದ್ರೇಯ, ಯಾಕೋಬ, ಯೋಹಾನ, ಫಿಲಿಪ್ಪ, ಬಾರ್ತಲೋಮಾಯ, ಮತ್ತಾಯ, ತೋಮ, ಅಲ್ಫಾಯನ ಮಗನಾದ ಯಾಕೋಬ, ಮತಾಭಿಮಾನಿ ಅನ್ನಿಸಿಕೊಂಡ ಸಿಮೋನ, ಯಾಕೋಬನ ಮಗನಾದ ಯೂದ, ಆತನನ್ನು ಹಿಡಿದುಕೊಡುವ ದ್ರೋಹಿಯಾದ ಇಸ್ಕರಿಯೂತ ಯೂದ ಇವರೇ (ಲೂಕ 6:14-16).

ಮತ್ತಾಯನು ನಂತರದ ಸಂದರ್ಭದವರೆಗೂ (ಯೇಸು ಆ ಹನ್ನೆರಡು ಜನರನ್ನು ತರಬೇತಿಯ ನಿಯೋಗದ ಮೇಲೆ ಕಳುಹಿಸಿದಾಗ) ತನ್ನ ಪಟ್ಟಿಯನ್ನು ಕೊಡಲಿಲ್ಲ. ಹೇಗೋ ಈ ಪಟ್ಟಿಯು ಹೋಲಿಕೆ ಉದ್ದೇಶಕ್ಕಾಗಿ ಇಲ್ಲಿ ಒಳಗೊಂಡಿದೆ:

> ಅಪೊಸ್ತಲರೆಂಬ ಹನ್ನೆರಡು ಮಂದಿಯ ಹೆಸರುಗಳು ಯಾವುವೆಂದರೆ - ಮೊದಲನೆಯವನು ಪೇತ್ರನೆನಿಸಿಕೊಳ್ಳುವ ಸಿಮೋನ, ಅವನ ತಮ್ಮನಾದ ಆಂದ್ರೇಯ, ಜೆಬೆದಾಯನ ಮಗನಾದ ಯಾಕೋಬ, ಅವನ ತಮ್ಮನಾದ ಯೋಹಾನ, ಫಿಲಿಪ್ಪಿ,

ಬಾರ್ತಲೋಮಾಯ, ತೋಮ, ಸುಂಕದ ಮತ್ತಾಯ, ಅಲ್ಫಾಯನ ಮಗನಾದ ಯಾಕೋಬ, ತದ್ದಾಯ, ಮತಾಭಿಮಾನಿ ಎಂದು ಹೆಸರಾದ ಸಿಮೋನ, ಯೇಸುವನ್ನು ಹಿಡುಕೊಟ್ಟ ಇಸ್ಕರಿಯೋತ ಯೂದ ಇವುಗಳೇ (ಮತ್ತಾಯ 10:2-4).

ನಾಲ್ಕನೆಯ ಮತ್ತು ಅಂತಿಮವಾದ ಪಟ್ಟಿಯು ಅಪೊಸ್ತಲರ ಕೃತ್ಯಗಳು 1ರಲ್ಲಿ ನಮಗೆ ಸಿಕ್ಕುತ್ತದೆ, ಆ ಸಮಯದಲ್ಲಿ ಯೂದನ ಬದಲಿ ಹೆಸರು ಆ ಸ್ಥಳವನ್ನು ಪಡೆದಿದೆ. "... ಪೇತ್ರ, ಯೋಹಾನ, ಯಾಕೋಬ, ಆಂದ್ರೇಯ, ಫಿಲಿಪ್ಪ, ತೋಮ, ಬಾರ್ತಲೋಮಾಯ, ಮತ್ತಾಯ, ಅಲ್ಫಾಯನ, ಯಾಕೋಬ, ಮತಾಭಿಮಾನಿ ಅನ್ನಿಸಿಕೊಂಡ ಸಿಮೋನ, ಯಾಕೋಬನ ಯೂದ ಇವರೇ" (ಅಪೊಸ್ತಲರ ಕೃತ್ಯಗಳು 1:13).

ಈ ನಾಲ್ಕು ಪಟ್ಟಿಯನ್ನು ಹೋಲಿಸಿದಾಗ ಅಲ್ಲೊಂದು ಮೌಲ್ಯವು ಸಿಕ್ಕುತ್ತದೆ. (ಈ ಪುಸ್ತಕದ ಉಪ ವಿಭಾಗದಲ್ಲಿ ಸಿಕ್ಕುವ "ಸುವಾರ್ತೆಯಲ್ಲಿ ಪಟ್ಟಿಯಾದ ಅಪೊಸ್ತಲರು" ಎಂಬ ಚಾರ್ಟನ್ನು ನೋಡಿರಿ.) ಉದಾಹರಣೆಗಾಗಿ, ಪೇತ್ರನ ಹೆಸರು ಎಲ್ಲಾ ಪಟ್ಟಿಯಲ್ಲಿ ಮೇಲಿ ರುವುದನ್ನು ಗಮನಿಸಿರಿ. ಇದರ ಅರ್ಥ ಪೇತ್ರನು "ಮೊದಲ ಪೋಪನು" ಎಂದು ಎಲ್ಲಿಯೂ ಸಾಭೀತುಪಡಿಸಿಲ್ಲ, ಆದರೆ ಆತನ ಯತೇಚ್ಛವಾಗಿ ಇರುವ ರೀತಿ ಮತ್ತು ಗಣನೀಯವಾದ ಕೌಶಲ್ಯಗಳು ಆತನನ್ನು ಸ್ವಾಭಾವಿಕವಾಗಿ ಅಪೊಸ್ತಲರಲ್ಲಿ ನಾಯಕನನ್ನಾಗಿಸಿದ್ದವು. ಯೂದನ ಹೆಸರು ಮೂರು ಪಟ್ಟಿಯಲ್ಲಿ ಅಂತಿಮವಾಗಿ ಸೂಚಿಸಲ್ಪಟ್ಟಿರುವುದನ್ನು ನಾವು ನೋಡುತ್ತೇವೆ, ಆತನ ಗುರುದ್ರೋಹದ ಕಾರ್ಯವು ಆತನನ್ನು ಕುಖ್ಯಾತ ಪ್ರಸಿದ್ಧತೆಗೆ ನಡಿಸಿತು.

ಇತರ ವಿವರಣೆಗಳನ್ನು ಕೂಡಾ ಸೂಚಿಸಬಹುದಾಗಿದೆ. ಉದಾಹರಣೆ, ಅಲ್ಲಿ ಅನೇಕ ಸಹೋದರರ ಜೋಡಿಗಳು ಇವೆ (ಮತ್ತು ತದ್ದಾಯದನು ಪ್ರತ್ಯಕ್ಷವಾಗಿಯೂ ಸಹ "ಯೂದನ ಮಗನಾದ ಯಾಕೋಬ" ಎಂದು ಗುರುತಿಸಲ್ಪಡುತ್ತಿದ್ದನು). ನಾಲ್ಕರ ಮೂರು ಗುಂಪುಗಳಾಗಿ ಮರಿಯುವುದಾಗಿದೆ ಮತ್ತು ಅದೇ ವ್ಯಕ್ತಿಯ ಪಟ್ಟಿಯ ಮಖ್ಯಸ್ಥನಾಗಿರುವದು ಪ್ರತಿಯೊಂದು ಪಟ್ಟಿಯ ಹೆಚ್ಚಿನ ಮಹತ್ವದ ಸಂಗತಿಯಾಗಿದ್ದು; ಪೇತ್ರನು ಮೊದಲ ಗುಂಪಿನ ನಾಯಕನಾಗಿದ್ದಾನೆ, ಫಿಲಿಪ್ಪನು ಎರಡನೆಯ ಗುಂಪಿನ ನಾಯಕನಾಗಿದ್ದಾನೆ, ಯಾಕೋಬನ ಮಗನಾದ ಅಲ್ಫಯನು ಮೂರನೆಯ ಗುಂಪಿನ ನಾಯಕನಾಗಿದ್ದಾನೆ. ಪ್ರತಿಯೊಂದು ಗುಂಪಿನಲ್ಲಿ ಹೆಸರುಗಳ ವ್ಯವಸ್ಥೆಯಲ್ಲಿ ಗಣನೀಯವಾದ ಏರುಪೇರು ಇರುವುದರಿಂದ ಈ ಮೂರು ಹೆಸರಿನ ಸರಿಯಾದ ಇರಿಸುವಿಕೆಯು ಪೂರ್ವಯೋಜಿತವಾದದ್ದು ಎಂಬಂತೆ ಕಾಣುತ್ತದೆ. ಪೇತ್ರ ಫಿಲಿಪ್ಪ ಮತ್ತು ಯಾಕೋಬನ ಮಗನಾದ ಅಲ್ಫಾಯರು ಬಹುಶಃ ತರಬೇತಿ ನಿಯೋಗದ ಮತ್ತು ವಿಶೇಷ ಯೋಜನೆಗಳಿಗಾಗಿ ಇರಿಸಿದ್ದ "ಗುಂಪಿನ ನಾಯಕರು" ಆಗಿರಬಹುದು.

ಮತ್ತೊಂದು ಸಾರಿ ಪಟ್ಟಿಯೆಡೆಗೆ ನೋಡಿರಿ. ಪೇತ್ರ ಮತ್ತು ಆಂದ್ರೆಯನು (ಯೋಹಾನ 1:40, 41; ಮತ್ತಾಯ 4:18), ಯಾಕೋಬ ಮತ್ತು ಯೋಹಾನ (ಮತ್ತಾಯ 4:21)[38] ಫಿಲಿಪ್ಪ ಮತ್ತು ಬಹುಶಃ ಬಾರ್ತಲೋಮಾಯ[39] (ಯೋಹಾನ 1:43, 45) ಮತ್ತು ಮತ್ತಾಯ (ಮತ್ತಾಯ 9:9) ಈ ವ್ಯಕ್ತಿಗಳನ್ನು ನಾವು ಹಿಂದಿನ ಪಾಠದಲ್ಲಿ ಅನೇಕ ಸಾರಿ ಬೇಟಿಯಾಗಿದ್ದೇವೆ. ಹೊಸ ಒಡಂಬಡಿಕೆಯಲ್ಲಿ ಇತರ ಬಗೆಗೆ ಕಡಿಮೆಯಾಗಿ ಹೇಳಲ್ಪಟ್ಟಿದೆ, ಆದರೆ ಅವರ ಬಗೆಗಿನ ಮೂರು ಮೂಲ ಸಂಗತಿಗಳ ವಿವರಗಳನ್ನು ನಾವು ಬಲ್ಲವರಾಗಿದ್ದೇವೆ. ಮೊದಲನೆಯದಾಗಿ ಕರೆಯಲ್ಪಟ್ಟ ಅವರುಗಳು ಪೇತ್ರ, ಆಂದ್ರೇಯ, ಯಾಕೋಬ, ಯೋಹಾನ ಮತ್ತು ಮತ್ತಾಯರು ಎಂದು ಅವರೆಲ್ಲರೂ ಕರೆಯಲ್ಪಟ್ಟವರಾಗಿರಲ್ಲ ಹೊರತಾಗಿ ಅವರ ಶಕ್ಯತೆಯ ಕಾರಣದಿಂದಲೇ. (ಯೇಸು ಅವರ ಬಲಹೀನತೆಯನ್ನು ಮತ್ತು ಕುಂದನ್ನು ನೋಡದೇ ಅವರು ಏನಾಗಬಹುದು ಎಂಬುದನ್ನು ನೋಡಿದನು. ದೇವರಿಗೆ ಸ್ತೋತ್ರವಾಗಲಿ ಆತನು ನಮ್ಮನ್ನೂ ಸಹ ಅದೇ ರೀತಿಯಲ್ಲಿ ನೋಡುವವನಾಗಿದ್ದಾನೆ!) ಮೂರನೆಯದಾಗಿ,

ಅವರೆಲ್ಲರೂ ಬೋಧನೆ ಮಾಡುವುದರಲ್ಲಿ ಮತ್ತು ದೆವ್ವಗಳನ್ನು ಬಿಡಿಸುವಲ್ಲಿ ಯೇಸುವಿನಿಂದ ಸಾಮರ್ಥ್ಯವನ್ನು ಪಡೆದಿದ್ದರು (ನೋಡಿರಿ ಮತ್ತಾಯ 10:1). ಈ ಎಲ್ಲಾ ವಿವರಗಳ ಜೊತೆ, "ಇಸ್ಕರಿಯೋತ ಯೂದನನ್ನು" ಸಹ ನಾನು ಜೋಡಿಸುವವನಾಗಿದ್ದೇನೆ.

## ಮುಕ್ತಾಯ

ಹನ್ನೆರಡು ಜನರ ಆಯ್ಕೆಯು ಮುಂದಿನ ಎರಡು ಅಧ್ಯಯನಗಳಲ್ಲಿ ನಾವು ಅಭ್ಯಾಸಿಸಲಿರುವ ಪರ್ವತ ಪ್ರಸಂಗಕ್ಕೆ ಚಾಲನೆಯನ್ನು ಇದು ಒದಗಿಸುತ್ತದೆ. ಈ ಪಾಠವನ್ನು ಮುಗಿಸುವ ಮುನ್ನ ಅಂತಿಮವಾದ ಕೆಲ ಅವಲೋಕನಗಳನ್ನು ನಾವು ಮಾಡೋಣ.

ಯೇಸುವು ಸಹ ಟೀಕೆಗೆ ಒಳಗಾದನು ಆದರೆ ಆತನ ನಿಯೋಗದಿಂದ ಆತನನ್ನು ಹಿನ್ನೆಡಸಲಿಲ್ಲ. ದೇವರ ಉದ್ದೇಶವನ್ನು ಸಂಪೂರ್ಣಗೊಳಿಸಲು ಅವಶ್ಯವಾದ ಎಲ್ಲವನ್ನೂ ಮಾಡುವುದನ್ನು ಆತನು ಮುಂದುವರೆಸಿದನು.

ಸರಿಯಾದುದನ್ನು ನೀನು ಮಾಡಿದಾಗ, ನೀನು ಟೀಕೆಗಳನ್ನು ಹೊಂದುತ್ತಿ (ನಮ್ಮ ಮುಂದಿನ ಪಾಠಗಳಲ್ಲಿ ನಾವು ನೋಡುವ ಹಾಗೆ [ಮತ್ತಾಯ 5:11]). ಟೀಕೆಗಳು ಬಂದಾಗ, ದೇವರ ಚಿತ್ತದ ಮಧ್ಯದಲ್ಲಿ ನೀನು ಯೋಗ್ಯವಾಗಿ ಇದ್ದಿಯೋ ಪರೀಕ್ಷಿಸಿ ಖಚಿತಪಡಿಸಿಕೋ (ನೋಡಿರಿ 1 ಪೇತ್ರ 4:14-16). ನಿನ್ನನ್ನು ನಿರಾಶೆಪಡಿಸುತ್ತವೆ ಎಂಬ ಕಾರಣದಿಂದ ನೀನು ಒಂದು ವೇಳೆ ಟೀಕೆಗಳಿಗೆ ಆಸ್ಪದಕೊಡದೇ ಇದ್ದರೆ ಆದ್ದರಿಂದ ನಾನು ಹೊರನಡೆ. ಇಲ್ಲವಾದರೆ ನಂಬಿಗಸ್ತನಾಗಿ ಇರಲು ಏನು ಅವಶ್ಯವೋ ಅದನ್ನು ಮಾಡು.

---

ಟಿಪ್ಪಣೆಗಳು

[1]ನಿಮಗೆ ಬೇಕಾದರೆ ಭೌತಿಕ ಬಿರುಗಾಳಿಯಂತಿರುವ ಚಿತ್ರದ ಪದಗಳನ್ನು ಈ ಪಾಠದ ಮುನ್ನುಡಿಯಾಗಿರಿಸಬಹುದು, [2]ಈ ಸಂಗತಿಯ ಮುಂದೆ ಶ್ರೇಷ್ಟವಾದ ಗಲಿಲಾಯದ ಸೇವೆಯ ಸಂಗತಿಗಳಲ್ಲಿ ಅನೇಕ ವಿಭಿನ್ನವಾದ ಸಾಂಗತ್ಯಗಳಲ್ಲಿನ ಭಿನ್ನತೆಗಳು ಇವೆ, ಸಾಧ್ಯತೆಯುಳ್ಳ ಏರುಪೇರುಗಳನ್ನು ತಪ್ಪುವ ಪ್ರಯತ್ನವನ್ನು ನಾನು ಮಾಡುವುದಿಲ್ಲ ಆದಾಗ್ಯೂ ಇತರ ಸಾಧ್ಯತೆಗಳನ್ನು ನಾನು ಸಾಂದರ್ಭಿಕವಾಗಿ ಸೂಚಿಸುವವನಾಗಿದ್ದೇನೆ. ಘಟನೆಯ ನಿಕರವಾದ ಪ್ರಸಂಗವು ಬಲು ಮಹತ್ವವಾಗಿದೆ ಎಂದಲ್ಲ: ಇಲ್ಲವಾ ದರೆ ಪರಿಶುದ್ಧಾತ್ಮನು ಆ ನಿಟ್ಟನಲ್ಲಿ ಬಲು ಸ್ಪಷ್ಟವಾಗಿರುತ್ತಾನೆ. [3]ಇತರ ಹಾಸ್ಯಾಸ್ಪದ ವಾದ ಸಂಪ್ರದಾಯಗಳಲ್ಲಿ ಇವುಗಳು ಇರುವವುಗಳು ಆಗಿವೆ. ಮೊಳೆಯ ಬೂಟುಗಳನ್ನು ಸಬ್ಬತ್ ದಿನದಲ್ಲಿ ಹಾಕಿಕೊಳ್ಳಬಾರದು ಯಾಕೆಂದರೆ ಅದು ಹೊರೆಯಾಗಿರುವುದು ಎಂದು; ಒಬ್ಬ ಮನುಷ್ಯನು ಬ್ರೆಡನ್ನು ತೆಗೆದುಕೊಂಡು ಹೋಗಬಾರದು: ಆದರೆ ಇಬ್ಬರು ವ್ಯಕ್ತಿಗಳು ಬ್ರೆಡನ್ನು ತಮ್ಮ ಮಧ್ಯದಲ್ಲಿ ಹೊತ್ತುಕೊಂಡು ಹೋಗಬಹುದು. [4]H. I. Hester, *The Heart of the New Testament* (Liberty, Mo.: Quality Press, 1963), 142. [5]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 305. [6]Adam Fahling, *The Life of Christ* (St. Louis, Mo.: Concordia Publishing House, 1936), 195. [7]ಯೇಸುವಿನ ಮೇಲೆ ಸಾಂಪ್ರದಾಯಿಕವಾದ ಸಬ್ಬತ್ತನ್ನು ಹಾಳುಮಾಡಿದ ಆರೋಪವನ್ನು ಹಾಕಲು ಫರಿಸಾಯರೂ ಕೂಡಾ ಬಲುವಾಗಿ ಪ್ರಯತ್ನಪಟ್ಟರು. ಆತನ ಭೂಲೋಕದ ಸೇವೆಯ ಕೊನೆಯಲ್ಲಿ, ಅನೇಕ ಕಷ್ಟಗಳ ಆರಂಭದಲ್ಲಿ, ಸಬ್ಬತ್ತನ್ನು ಮುರಿದ ಆರೋಪವು ಎಂದಿಗೂ ಬೆಳಯಲಿಲ್ಲ. [8]*ಕ್ರಿಸ್ತನ ಜೀವಿತ, 1* ಪುಸ್ತಕದಲ್ಲಿ ಸಿಕ್ಕುವ "ಯೆಹೂದಿಗಳ ಹಬ್ಬಗಳು" ಎಂಬ ಚಾರ್ಟನ್ನು ನೋಡಿರಿ. [9]ವಿವಿಧ ಸಾಧ್ಯಗಳ ಮೇಲಿರುವ ಚರ್ಚೆಯು A. T. Robertson, *A Harmony of the Gospels for Students of the Life of Christ* (New York: Harper & Row, 1950), 267-70 ರಲ್ಲಿ ಕೊಡಲಾಗಿದೆ. [10]*ಕ್ರಿಸ್ತನ ಜೀವಿತ, 1* ಪುಸ್ತಕದಲ್ಲಿನ "ಪ್ರತಿಯೊಂದಕ್ಕೂ ಸಮಯ" ಎಂಬ ಪಾಠವನ್ನು ನೋಡಿರಿ.

[11]ಯೋಹಾನನ ಪುಸ್ತಕದಲ್ಲಿ ಅಂಥ ಆರು ಉಪದೇಶಗಳು ದಾಖಲಾಗಿವೆ. ಈ ಎಲ್ಲಾ ಸಮರ್ಥನೆಗಳಲ್ಲಿ ಒಂದು ಯೆರೂಸಲೇಮಿನಲ್ಲಿತ್ತು. [12]ಯೇಸುವಿನ ಸಮರ್ಥನೆಯ ದೀರ್ಘವಾದ ವಿಚಾರಣೆಗೋಸ್ಕರ ನಂತರದಲ್ಲಿ ಈ ಪುಸ್ತಕದಲ್ಲಿ ಸಿಕ್ಕುವ "ದೇವರಿಗೆ ಸಮಾನ" ಎಂಬುದನ್ನು

ನೋಡಿರಿ. [13]James Burton Coffman, *Commentary on John* (Austin, Tex.: Firm Foundation Publishing House, 1974), 158. [14]ಯೇಸು ಗಲಿಲಾಯಕ್ಕೆ ಹಿಂತಿರುಗಿದನು ಎಂದು ನಾವು ತಾರ್ಕಿಕ ರೀತಿಯಲ್ಲಿ ವಿಶ್ಲೇಷಿಸುವವರಾಗಿದ್ದೇವೆ; ಮುಂದಿನ ಕಥೆಯು ಸಭಾಮಂದಿರದಲ್ಲಿ ಇರುವುದಾಗಿದೆ. ಮಾರ್ಕನ ಪ್ರಕಾರ ಈ ಸಭಾಮಂದಿರದಲ್ಲಿ ಇರುವ ಫರಿಸಾಯರು ಯೇಸುವಿಗೆ ಪೈರಿನ ಹೊಲದಲ್ಲಿ ಸವಾಲನ್ನು ಎಸೆದವೇ ಆಗಿದ್ದರು (ಮತ್ತಾಯ 12:2, 9). ಮಾರ್ಕನ ಪ್ರಕಾರ ಈ ಸಭಾಮಂದಿರವು ಸಮುದ್ರಕ್ಕೆ ಸ್ಪಷ್ಟವಾಗಿ ಹತ್ತಿರದಲ್ಲಿ ಇತ್ತು ಎಂದು (ಅದು ಗಲಿಲಾಯ ಸಮುದ್ರವಾಗಿತ್ತು) (ಮಾರ್ಕ 3:5-7). [15]ಈ ಘಟನೆಯು ಪಸ್ಕಹಬ್ಬದಲ್ಲಿ ಸಂಭವಿಸಿದ್ದಾದರೆ, ಆ ಪೈರು ಬಹುಶಃ ಜವೆಗೋಧಿ ಆಗಿರಬಹುದು. [16]ಲೂಕನ ಪ್ರಕಾರ, ಆ ಫರಿಸಾಯರು ಶಿಷ್ಯರೊಂದಿಗೆ ಸಂಘರ್ಷಕ್ಕಿಳಿದರು. ಮತ್ತಾಯ ಮತ್ತು ಮಾರ್ಕರ ಪ್ರಕಾರ, ಫರಿಸಾಯರು ಯೇಸುವಿಗೆ ಸವಾಲನ್ನೊಡ್ಡಿದರು. ಬಹುಶಃ ಅವರು ಎರಡನ್ನೂ ಮಾಡಿದರು. [17]ಈ ಉದಾಹರಣೆಗಳಲ್ಲಿ ಯಾವದೂ ದೇವ ನಿಯಮವನ್ನು ಅಪರಿಶುದ್ಧತೆಯಿಂದ ಮುರಿಯಬಹುದು ಎಂದು ಯಾವುದೇ ಆಧಾರವೂ ಇಲ್ಲ. ಯೇಸುವಿನ ಪ್ರಶ್ನೆಯು ಏನೆಂದರೆ ಯೆಹೂದಿ ನಾಯಕರುಗಳು ದಾವೀದನನ್ನು ದೂಷಿಸದಿದ್ದಾಗ, ಆತನನ್ನು ಮತ್ತು ಆತನ ಹಿಂಬಾಲಕರನ್ನು ದೂಷಿಸುವದು ಏಕೆ? [18]NASBಯಲ್ಲಿ ಹೊಶೆಯ 6:6ರಲ್ಲಿ ಅನುಕಂಪದ ಬದಲಾಗಿ "ನಂಬಿಗಸ್ತತನ" ಎಂದಿದೆ, ಆದರೆ KJVಯಲ್ಲಿ "ಕರುಣೆ" ಎಂದಿದೆ. [19]"ಕೆಲವು" ಇದು ಗ್ರೀಕ್ ವೇದಭಾಗದ ನಿಖರವಾದ ಭಾಷಾಂತರವಾಗಿದೆ, ಆದರೆ KJV ಭಾಷಾಂತರವು "ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ ಈ ಸ್ಥಳದಲ್ಲಿ ಈ ದೇವಾಲಯಕ್ಕಿಂತ ದೊಡ್ಡದಾದ ಸ್ಥಳವಿರುವದು" ಎಂದು ಸೂಚಿತವಾದ ಹೇಳಿಕೆಯನ್ನು ತಿಳಿಸುವುದಾಗಿದೆ. [20]ಇದು ಯೆಹೂದಿಗಳ ಉದ್ಧಟತನದ ಹೇಳಿಕೆಯಾಗಿತ್ತು. ಅವರಿಗೆ ತಿಳಿದಂತೆ, ಕೇವಲ ಒಂದು ಸಂಗತಿ ಮಾತ್ರ (ಅಥವಾ ಒಂದು) ನಿರ್ವ್ಯಾಜ್ಯ ದೇವರ ಆಲಯಕ್ಕಿಂತ ದೊಡ್ಡದ್ದಾಗಿತ್ತು!

[21]ಇದು ಮತ್ತಾಯನ ಹೇಳಿಕೆಯಂತೆ ಸೂಚಿತವಾದದ್ದಾಗಿದೆ (ಮತ್ತಾಯ 12:9). [22]ಅವರು ಆತನನ್ನು ಯೆಹೂದಿ ಸಭೆಯ ಮುಂದೆ ಹೀಗಳೆಯಬೇಕೆಂದು ಬಯಸಿದ್ದರು ಅದು ಆತನ ಮರಣ ದಂಡನೆಯನ್ನು ಸೂಚಿಸುವಂತದ್ದು ಆಗಿತ್ತು. [23]ಅವರ ಸ್ವಂತದ ನಿಯಮಗಳು ಏಳನೆಯ ದಿನದಲ್ಲಿ ಜೀವವನ್ನು ಉಳಿಸಲು ವೈದ್ಯರಿಗೆ ಮತ್ತು ಇತರರಿಗೆ ಅವಕಾಶ ಕೊಡುವವುಗಳು ಆಗಿದ್ದವು. (Alfred Edersheim, *The Life and Times of Jesus the Messiah,* New Updated Version [Peabody, Mass.: Hendrickson Publishers, 1993], 515). [24]ಯೇಸು ಇನ್ನೊಂದು ಸಂದರ್ಭದಲ್ಲಿ ಎತ್ತಿಗೆ ಬದಲಾಗಿ ಇನ್ನೊಂದು ಪ್ರಾಣಿಯನ್ನು ಬಳಸಿ ಅದೇ ದೃಷ್ಟಾಂತವನ್ನು ಉಪಯೋಗಿಸಿದ್ದನು (ಲೂಕ 14:5). "ಬಾವಿಯಲ್ಲಿ ಆಕಳು" ಉಪಮಾನವು ಸಭೆಗೋಸ್ಕರದ ಅಥವಾ ದೇವರ ಆಜ್ಞೆಗಳನ್ನು ನಿರ್ಲಕ್ಷಿಸುವ ಒಂದು ನೆವವಾಗಿದೆ. ಒಬ್ಬ ವೃದ್ಧ ಬೋಧಕನು ಒಬ್ಬ ಮನುಷ್ಯನಿಗೆ, "ಒಂದು ವೇಳೆ ನಿನ್ನ ಆಕಳು ಪದೇ ಪದೇ ಬಾವಿಯಲ್ಲಿ ಬೀಳುತ್ತಿದ್ದರೆ, ನೀನು ಅದನ್ನು ಮಾರಿ ಬಿಡು ಇಲ್ಲವೇ ಅದೇ ಬಾವಿಯಲ್ಲಿ ಮುಚ್ಚಿಬಿಡು" ಎಂದು ಹೇಳಿದರು! [25]ಫರಿಸಾಯರು ಅವರನ್ನು ದ್ವೇಷಿಸುತ್ತಿದ್ದರು ಯಾಕೆಂದರೆ ಅವರು ಹೆರೋದ ಅರಸನ ಅವಿಷ್ಕರಗಳಾದ ವಿಗ್ರಹಾರಾಧಕರ/ಅನ್ಯಜನರ ಬೆಂಬಲಿತರಾಗಿದ್ದರು. [26]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 198. [27]"ಇದುಮಾಯ" ಎದೋಮಿಯಕ ಸ್ಥಳ ಎಂದು ಸೂಚಿಸುವುದಾಗಿದೆ ("ಇದುಮಿಯಾ" ಇದು ಗ್ರೀಕ ಪದವು "ಎದೋಮ್" ಎಂಬುದರಿಂದ ಬಂದದ್ದಾಗಿದೆ). ಹೆರೋದ ಅರಸನು ಇದುಮಾಯದವನು/ಎದೋಮದವನು. [28]ಈ ವಿವಿಧ ಸ್ಥಳಗಳ ಇರುವಿಕೆಯನ್ನು ನೋಡಲು "ಈ ಪುಸ್ತಕದಲ್ಲಿ ಕ್ರಿಸ್ತನ ಪ್ರಯಾಣವನ್ನು ಹೊಂದಿಕೊಂಡಿರುವ" ನಕಾಶೆಯನ್ನು ನೋಡಿರಿ. [29]ಮತ್ತೊಂದು ಸಾರಿ ಜನಸಮೂಹವು ಯೇಸುವನ್ನು ನೂಕತೊಡಗಿತು, ಹಿಂದೆ ಆತನು ಮಾಡಿದಂತೆ ಒಂದು ವೇಳೆ ಆತನು ದೋಣಿಯು ಪೀಠವನ್ನಾಗಿಸಲು ಆತನಿಗೆ ಅವಶ್ಯವಿದಿದ್ದಾದರೆ ಅದು ಸಿದ್ಧವಾಗಿ ಇರಿಸಲ್ಪಟ್ಟ ಹಾಗಿತ್ತು. ಆ ದೋಣಿಯು ಈ ಸಾರಿ ನಿಜವಾಗಿಯ ಉಪಯೋಗ ವಾಯಿತು ಎಂಬುದರ ಬಗೆಗೆ ನಮಗೆ ಯಾವ ಸೂಚನೆಯೂ ಸಿಕ್ಕಿಲ್ಲ. [30]ಇದು ಶಿಷ್ಯತ್ವದ ಮೂರನೆಯ ಹಂತವಾಗಿದ್ದು - ಆರಿಸಲ್ಪಟ್ಟ ಕೆಲವರ ವಿಶೇಷಹಂತವಾಗಿದೆ.

[31]ಅದು ಯಾವ ಬೆಟ್ಟ ಎಂಬುದರ ಬಗೆಗೆ ನಮಗೆ ಖಚಿತವಿಲ್ಲ. ಲೂಕ 6ರಲ್ಲಿ ಪ್ರಸಗವು ಮತ್ತಾಯ 5-7ರಲ್ಲಿನ ಪ್ರಸಂಗವೂ ಒಂದೇ ಆಗಿದ್ದರೆ, ಇದು ಬಹುಶ ಪರ್ವತ ಮೇಲೆ ಪ್ರಸಂಗಿಸಿದ ಬೋಧನೆಯಾಗಿರಬಹುದು (ಮತ್ತಾಯ 5:1; ಲೂಕ 6:12, 17). ಕಪೆರ್ನೌಮಿನಿಂದ ಅಷ್ಟೇನೂ ದೂರವಿರದ ಬೆಟ್ಟವೊಂದು ಅಲ್ಲಿದ್ದು, ಈಗ ಅದು ಧನ್ಯವಾಕ್ಯಗಳು ಎಂದು ಕರೆಯಲ್ಪಡುತ್ತದೆ. ಇನ್ನೊಂದು ಸಾಧ್ಯತೆಯೆಂದರೆ ಆ ಬೆಟ್ಟವು ಎಂದೂ ಹೆಸರಾಗಿದೆ. [32]ಇದು ಯೇಸು ಶಿಷ್ಯರನ್ನು ಕರೆದ ಎರಡನೆಯ ಹಂತವಾಗಿದೆ. [33]ಯೇಸು ತನ್ನನ್ನು ತಾನೇ ಅಪೊಸ್ತಲ ಎಂದು ಕರೆದುಕೊಂಡನು. ಯಾಕೆಂದರೆ

ಆತನು ದೇವರಿಂದ ಕಳುಹಿಸಲ್ಪಟ್ಟವನಾಗಿದ್ದನು (ಇಬ್ರಿಯ 3:1). ಸಮಾನ್ಯರ್ಥದಲ್ಲಿ "ಅಪೊಸ್ತಲ" ಎಂಬ ಪದವನ್ನು ಇತರ ಉದಾಹರಣೆಗಾಗಿ ಬಳಸುವುದಾಗಿದೆ, (ನೋಡಿರಿ ಅಪೊಸ್ತಲರ ಕೃತ್ಯಗಳು 14:14; ರೋಮಾಪುರ 16:7; 2 ಕೊರಿಂಥ 8:23; ಫಿಲಿಪ್ಪಿ 2:25). (ಇನ್ನೋ ಕೆಲವಡೆ ಗ್ರೀಕ್ ಪದದಲ್ಲಿ "ದೂತ" ಭಾಷಾಂತರವಾಗಿದೆ.) [34]ಹನ್ನೆರಡು ಕುಲ ಮತ್ತು ಹನ್ನೆರಡು ಅಪೊಸ್ತಲರ ಮಧ್ಯದ ಸೂಚ್ಯವಾದ ಸಂಬಂಧವನ್ನು ಮತ್ತಾಯ 19:28 ಮತ್ತು ಲೂಕ 22:30ನ್ನು ನೋಡಿರಿ. [35]ಈ ಉಪನಾಮದ ಬಳಕೆಯು ಬಹುಶ ಹಾಸ್ಯದ ಲೇಪನವನ್ನು ಹೊಂದಿದ್ದಾಗಿರಬಹುದು. ಅವರ ಉಗ್ರಮನೋವೃತ್ತಿಗಾಗಿ ಯೇಸು ಅವರನ್ನು ಆ ರೀತಿಯಾಗಿ ಕರೆದಿರಬಹುದು (ಲೂಕ 9:51-56; ಮಾರ್ಕ 9:38ನ್ನು ನೋಡಿರಿ). ಯೇಸುವಿನ ಪ್ರಭಾವದ ಮೂಲಕ ಈ ಮನೋವೃತ್ತಿಯು ನಿರ್ನಾಮವಾಗಲ್ಪಟ್ಟಿತು ಮತ್ತು ಮಾರ್ಪಡಲಾಯಿತು. [36]"ಇಸ್ಕರಿಯೋತ" ಎಂಬ ಹೆಸರಿನ ಅರ್ಥವು ಬಹುಶ "ಕೆರಿಯೋತ್" ಎಂದಾಗಿರಬಹುದಾಗಿದ್ದು, ಯೂದ ಆ ಪಟ್ಟಣದಿಂದ ಬಂದವನು ಎಂದು ಸೂಚಿಸುವುದಾಗಿದೆ. (ಯೆಹೋಶುವ 15:25ನ್ನು ಓದಿರಿ.) ಪ್ರತ್ಯಕ್ಷವಾಗಿ ಯೂದನನ್ನು ಹೊರತುಪಡಿಸಿ ಎಲ್ಲಾ ಅಪೋಸ್ತಲರು ಗಲಿಲಾಯದವರಾಗಿದ್ದಾರು. [37]ಇವರಲ್ಲಿ ಕೆಲವರಿಗೆ ಇತರ ಹೆಸರುಗಳನ್ನು ಕೊಡಲಾಗಿದೆ. ಉದಾಹರಣೆಗೆ, ತೋಮನು "ದಿದುಮ" (ಅವಳಿ) ಎಂದು ಕರೆಯಲಾಗಿದೆ (ಯೋಹಾನ 11:16). ನಮ್ಮ ಅಧ್ಯಯನದ್ಲಿ ಅಲ್ಲಿಗೆ ಬಂದಾಗ ನಾವು ಅವುಗಳನ್ನು ನೋಡುತ್ತೇವೆ. [38]ಯೋಹಾನ ನೊಡನೆ ಯಾಕೋಬನು ಯೇಸುವಿನ ಪ್ರಥಮ ಶಿಷ್ಯರಲ್ಲಿ ಇದ್ದಿರಬಹುದು. [39]ಅನೇಕರ ಪ್ರಕಾರ ಯೋಹನ 1:45-51ರಲ್ಲಿ ಸೂಚಿಸಲಾದ ನತಾನಿಯೇಲನ ಇನ್ನೊಂದು ಹೆಸರು ಬಾರ್ತಲೋಮಾಯ ಎಂದು ಯೋಚಿಸುವವರಾಗಿದ್ದಾರೆ.